drink, what I wear, how i walk, whether I wear watch in the right hand or left hand, what type of cooling glass I wear etc., etc. And it is natural because I am the Chief Minister of this State. I am subject to all types of criticism. If I become free from these restrictions, I will be a free citizen. I will have equal rights. Let me enjoy and see how you will face it There is no higher post than this post in the State excepting that of the Governor's. But now I have enjoyed suff ciently- I enjoy beautiful bunglow, Benz Car, Helicoptor purchased by my predecessor.

SRI B.B. SAYANAK.—Your enjoyment is of only eighteen months.

SRI R. GUNDU RAO.—It is enough for me. Eighteen months time is not sufficient for those who are old. I am an young man. Why should I worry? Even after 15 years again I can come and enjoy. Helicoptor is not purchased by me. It was purchased by my predecessor and kept for my use. Car is also purchased by my predecessor. Everything is there. I am not worried. But I want a healthy democracy and strong opposition. Sri Bommai is today the President of the State unit of a National party and is also the leader of that Party group on the floor of the House. Let him build up a strong opposition. Let us face the elections and if people elect their Party, we will welcome them. There are people who will be waiting with garlands. They will never show their garlands to others. When the counting of votes is going on, if they hear that Sri Bommai is leading by a certain number of votes, they will say Bommai is a nice man. I am sure he will win. If somebody comes and says that " Sri Mattikatti is leading" these people will again say: ' Yes, Mattikatti is a young man. I know he will win." Likewise they argue. Ultimately somebody will get elected and these people will be the firs' men to garland the victorious candidate. Such people are there in our society. So, I seek your cooperation. As far as the Administrative Reforms reports like Hanumanthaiaya Report and so many other reports are concerned unless there is a healthy democracy and strong opposition and the fullest coorperation from the society, it is very difficult to implement fully anything. May be, we are partially trying to improve and we are moving in that direction. We have stopped this corruption in recruitment. The talk of the town was the recruitment of sub-inspectors. We have stopped corruption in many other recruitments. We may not be able to be successful fully. We are pround to say that we have at least done it. Regarding excise we have already told about it. Regarding Police Department, the hon.member Sri Rajashekaran was referring to the Inspector General of Police. He is a very

responsible person and has a very very clean record. Due to so many reasons there were partialities and his promotion was overlooked. We have to see only on their performance and record. We should not go on caste basis. We did not go on caste basis. What can I do? He is Rajashekaran. If another Rajashekaran comes, I cannot blame him. I am Rao and the IGP is also Rao.

SRI M.V. RAJASHEKARAN.—I never said that so and so has been selected on the caste basis, I am the lost person to say that. If a man is efficient, you put him to the suitable post to whatever caste he may belong.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ್ದನ್ನು ತಾವು ಅರ್ಥ ಮಾಡಿಕೊಂಡಿದ್ದೀರೆಂದು ನಾನು ಭಾವಿಸುತ್ತೇನೆ. ಮುಖ್ಯ ಮಂತ್ರಿಗಳು ರಾವ್ ಮುಖ್ಯ ಕಾರ್ಯದರ್ಶಿಗಳು ರಾವ್ ಮತ್ತು ಐ.ಜಿ.ಪಿ, ಯವರೂ ರಾವ್ ಇದರ ಅರ್ಥ... we never question the integrity and honesty of the officer, ಅಧಿಕಾರಿಗಳು ಯಾವ ಜಾತಿಯವರಿದ್ದರೂ ಆಷ್ಟೆ. ಒಳ್ಳೆಯವ ರಾಗಿದ್ದರೆ ಒಳ್ಳೆಯ ಕೆಲಸಗಳಾಗುತ್ತವೆ. ವಿಧಾನ ಸೌಧದಲ್ಲಿರತಕ್ಕ ಅಧಿಕಾರಿಗಳ ವಿವಿಧ ಸ್ಥಾನಗಳು ರಾಜ್ಯದ ಜನರಲ್ಲಿ ನಂಬಿಕೆ ಹುಟ್ಟಿಸುವ ರೀತಿಯಲ್ಲಿರಬೇಕೆಂದು ನಾನು ಒಂದು ಸಲ ಹೇಳಿದ್ದೇನೆ. ಮಾನ್ಯ ದೇವೇಗೌಡರೂ ಸಹ ಹೇಳಿದ್ದು ಇದನ್ನೇ ಮಂತ್ರಿ ಮಂಡಲವನ್ನು ರಚಿಸುವಾಗ ರಾಜ್ಯದ ಎಲ್ಲ ಭಾಗ ಗಳಿಗೂ ಪ್ರಾತಿನಿಧ್ಯ ಕೊಡಬೇಕೆಂದು ಆಲೋಚನೆ ಮಾಡಿ ಕೊಡುತ್ತಿದ್ದೀರಿ. ಅದೇ ರೀತಿ Wherever there are eligible officer to become Secretaries, if in all respect they are qualified, they should be given opportunity. We never questioned that Police Officer.

ಶ್ರೀ ಆರ್. ಗುಂಡೂರಾವ್.—I know.

SRI S.R. BOMMAI.—But at the same time in a democracy not only justice is to be done but also it must appear to be c.

SRI R. GUNDU RAO.—I fully agree with you. On that basis I am proceeding. You have correctly said... ಯಾವ ಜಾತಿಯವರು ಅಧಿಕಾರಕ್ಕೆ ಬಂದರೂ ಆ ಜಾತಿಯವರಿಗೆಲ್ಲ ಒಳ್ಳೆಯದಾಗುವುದಿಲ್ಲ. ಈ ರಾಜ್ಯದಲ್ಲಿ ಅನೇಕ ವರ್ಷಗಳ ಕಾಲ ಲಿಂಗಾಯಿತರು ಮುಖ್ಯ ಮಂತ್ರಿಗಳಾಗಿದ್ದರು. ಇವತ್ತು ಎಲ್ಲ ಲಿಂಗಾಯಿತರು ಬೆಂಜ್ ಕಾರ್‌ನಲ್ಲಿ ತಿರುಗಾಡುತ್ತಿದ್ದಾರೆಯೆ? ಯಾರೂ ಇಲ್ಲ. ಅವರವರ ಕಸಬು-ಕೆಲಸ ಮಾಡಲೇಬೇಕು. ಒಕ್ಕಲಿಗರು ಮುಖ್ಯ ಮಂತ್ರಿಗಳಾಗಿದ್ದರು. ಇವತ್ತು ಒಕ್ಕಲಿಗರೆಲ್ಲ ಅನುಕೂಲಸ್ಥರಾಗಿದ್ದಾರೆಯೇ? ಏನಿಲ್ಲ. ಆದುದರಿಂದ, ಇದೆಲ್ಲಾ ಜಾತಿ ಮೇಲೆ ಆಥವಾ ಇನ್ನೊಂದರ ಮೇಲೆ ಆಗುವುದಿಲ್ಲ. ಸಾಧನೆ ಮೇಲೆ ಮಾತ್ರ ಸಾಧ್ಯ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳಿದ್ದಕ್ಕೆ ಇನ್ನೊಂದನ್ನು ಸೇರಿಸುವುದಾದರೆ... ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಂದಿನಿಂದ ಬ್ರಾಹ್ಮಣರೇ ಪ್ರಧಾನ ಮಂತ್ರಿಗಳಾಗಿದ್ದಾರೆ. ನಾನು ಹೇಳಿದ್ದೇನೆ-ಒಂದು ಕಾಲಕ್ಕೆ ಪ್ರಧಾನ ಮಂತ್ರಿಗಳೂ ಬ್ರಾಹ್ಮಣರಾಗಿದ್ದರು, ಮುಖ್ಯ ನ್ಯಾಯಾಧೀಶರೂ ಬ್ರಾಹ್ಮಣರಾಗಿದ್ದರು, ಪಕ್ಷದ ಅಧ್ಯಕ್ಷರೂ ಬ್ರಾಹ್ಮಣರಾಗಿದ್ದರು, ರಾಷ್ಟ್ರಪತಿಯವರೂ ಬ್ರಾಹ್ಮಣ ರಾಗಿದ್ದರು. ಅಂದರೆ, ಬ್ರಾಹ್ಮಣರ ಬಡತನ ಹೋಯಿತೆಂದಲ್ಲ. ಜನರ ಅಭಿವೃದ್ಧಿ ಸರ್ಕಾರ ಕೈಗೊಳ್ಳುವ ಕಾರ್ಯಕ್ರಮ ಮತ್ತು ಅದು ಅನುಸರಿಸುವ ಕಾರ್ಯಾಚರಣೆ ಮೇಲೆ ಅವಲಂಬಿತವಾಗಿರುತ್ತದೆ.

ಶ್ರೀ ಆರ್. ಗುಂಡೂರಾವ್.—ಇಷ್ಟೆಲ್ಲಾ ಇದ್ದರೂ ಬ್ರಾಹ್ಮಣರು ಗಂಟೆ ಹೊಡೆಯುವುದು ತಪ್ಪಲಿಲ್ಲ. ಪ್ರಧಾನ ಮಂತ್ರಿಗಳೂ ರಾಷ್ಟ್ರಾಧ್ಯಕ್ಷರೂ ಎಲ್ಲರೂ ಬ್ರಾಹ್ಮಣರಾಗಿದ್ದರೂ ಬ್ರಾಹ್ಮಣ ಜನಾಂಗದವರು ಜಾಗಟೆ ಹೊಡೆಯುವುದು ಮತ್ತು ಸಂಬಳ ಜಾಸ್ತಿ ಮಾಡಬೇಕೆಂದು ಗೋಳು

ಹೊಯ್ದುಕೊಳ್ಳುತ್ತಲೇ ಇದ್ದಾರೆ. ಅರ್ಜಿ ಕೊಡುತ್ತಲೇ ಇದ್ದಾರೆ. ಆದುದರಿಂದ, ಒಂದು ಜಾತಿಯವರು ಅಧಿಕಾರದಲ್ಲಿದ್ದರೆ ಜಾತಿಯವರೆಲ್ಲ ಮೇಲೆ ಬರುತ್ತಾರೆಂದಲ್ಲ. ಜನತಾ ಪಕ್ಷ ಅಧಿಕಾರದಲ್ಲಿದ್ದಾಗಲೂ ಬ್ರಾಹ್ಮಣರೇ ಪ್ರಧಾನ ಮಂತ್ರಿಗಳಾಗಿದ್ದರಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾತಂತ್ರ್ಯ ಬಂದನಂತರವೆಂದರೆ ಜನತಾ ಪಕ್ಷ ಅಧಿಕಾರದಲ್ಲಿದ್ದ ಕಾಲವೂ ಸೇರುತ್ತದಲ್ಲವೆ? ಆದ್ದರಿಂದಲೇ ನಾನು ಸ್ವಾತಂತ್ರ್ಯ ಬಂದಮೇಲೆ ಎಂದು ಹೇಳಿದ್ದು.

ಶ್ರೀ ಆರ್ ಗುಂಡೂರಾವ್.—ಸ್ವಾತಂತ್ರ್ಯ ಪೂರ್ವದಲ್ಲೂ ಸಹ ದೇಶದ ಸ್ವಾತಂತ್ರ್ಯ ಕಹಳೆ ಊದಲಿಕ್ಕೆ ಸರ್ವಸಿದ್ಧತೆ ಮಾಡಿದವರೂ ಬ್ರಾಹ್ಮಣರೇ.

ಶ್ರೀ ಶೀರ್ನಳ್ಳಿ ಚಂದ್ರಶೇಖರ್.—ವಿಧಾನ ಸಭೆ ಬಿಟ್ಟರೆ ಇನ್ನೆಲ್ಲ ಕಡೆಯೂ ಇದ್ದಾರೆ.

ಶ್ರೀ ಆರ್. ಗುಂಡೂರಾವ್. —ಪತ್ರಿಕೆಗಳನ್ನು ಬರೆದವರು.....ಮಹಾರಾಷ್ಟ್ರದಲ್ಲಿ ... ಬೇಕಾದಷ್ಟು ಜನ ಇದ್ದರು.... Sometimes, Mr, Arumugham talks about Dr Ambedkar. When he established an institution in Maharashtra Dr. Ambedkar has appointed right from the Principal to the Accountant, only Brahmins. What Mr. Arumugham?

SRI C.M. ARUMUGHAM.—Yes.

LAUGHTER

SRI MATHIKATTI.—You say 'yes' to everything.

SRI C.M. ARUMUGHAM.—I am not like you. I warn you. Take care. What are you talking. I am not a sheep, going behind anybody Take care.

SRI R. GUNDU RAO.—He just joked.

SRI C.M. ARUMUGHAM.—Your age is not equal even to my experience in politics in the country, What is your experience?

MR. SPEAKER.—Please...

SRI C.M. ARUMUGHAM.—Sir, he says I always say yes Sir I will tell one thing. Even in my Dr. Ambedkar,s Medical College, I have appointed only Brahmins to all top posts because they are experienced and have knowledge and also they are qualified. What do you think?

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸದಸ್ಯರು ಈ ರೀತಿ ಸಂಭೋಧನೆ ಮಾಡಬಹುದೆ?

SRI C.M. ARUMUGHAM.—I say like that only. What is that you want to say. I know you, don't talk.

SKI MALLUR ANANDA RAO.—You cannot threaten like that.

(Interruption)

SRI V.A. MATHIKATTI.—Mr. Speaker, I have no intention to hurt him.

SRI B. B. SAYANAK.— Mr. Arumugham has not said anything unparliamentary.

MR. SPEAKER.— Please resume your seats. Now the Chief Minister will continue to reply.

SRI V.A. MATHIKATTI.—Whatever he says about our people will also be taken seriously.

SRI R. GUNDU RAO.—Mr. Arumugam, he never wanted to hurt you. He has no motivation. It is alright.

MR. SPEAKER.—It was a very serious matter the Chief Minister has touched. But unnecessarily the seriousness was taken away. In fact the principal of the College was the brother of the late Justice Gajendragadkar. He was making a very good point but the effect was teken away. Let the Chief Minister continue.

ಶ್ರೀ ಆರ್. ಗುಂಡೂರಾವ್.—ಆದುದರಿಂದ, ಎಲ್ಲ ವಿಚಾರದಲ್ಲೂ ಜಾತಿ ಪ್ರಶ್ನೆ ತರುವ ಹಾಗಿಲ್ಲ. ಅದಕ್ಕಾಗಿಯೇ ನಾನು ಜಾತಿ ವಿಷಯವನ್ನು ತರಬಾರದೆಂದು ಹೇಳಿದ್ದು. ಇಂಥಾ ಸಮಾಜ ನಮ್ಮಲ್ಲಿದೆ. ನಾವು ದಕ್ಷತೆಯನ್ನು ನೋಡಬೇಕು. ಆದರೆ, ಕೆಲವರ ಅಲ್ಪತನದಿಂದ ಮತ್ತು ಅಲ್ಪ ಬುದ್ಧಿಯಿಂದ, ಹಾಗೂ ಬೇರೆ ಕೆಲಸವಿಲ್ಲದೆ ಸಂಪ್ರದಾಯಕ್ಕೆ ಕಾಳಿತುಕೊಂಡು ಬ್ರಾಹ್ಮಣರು ಮುಖ್ಯಮಂತ್ರಿಯಾದರು, ಬ್ರಾಹ್ಮಣರು ಮುಖ್ಯ ಕಾರ್ಯದರ್ಶಿಯಾದರೆಂದು ಹೇಳುವುದು ಅವರ ಸಣ್ಣತನವನ್ನು ತೋರಿಸುತ್ತದೆ. ಅವರ ಲಿಮಿಟೇಷನ್ನೇ ಅಷ್ಟು. ಅದನ್ನು ತಡೆಯಲಿಕ್ಕೆ ಸಾಧ್ಯವಿಲ್ಲ. India would never have been free if such people were not there. People then thought of only freedom ; without any caste. relgion and other things they have participated in the freedom movement and ousted the mighty British Empire. Unfortunately, these people who have no capacity, who have no performance, who have no knowledge, came up somehow to small places. They have no other qualifications It is not the caste that is important. Their dedication and committment and honesty, tavare more important. Supposing a person suffers from Cancer or Asthma and goes to a Doctor... . can he say that he wants a particular community doctor ? It is the doctor who cures whether he belongs to Harijan, SC or the backward class. It is the doctor who will cure the disease. So, they will go to the hospital. Sri Bommai is a senior lawyer in Hubli and Dharwar. Suppose a case is there and if anybody comes, can he say 'I do not accept any client other than my own community'. Then, I do not think any case will came to him because he belongs to a particular community. It is not the caste. It is the ability and the performance which makes a man more perfect. That is more important. ಇವತ್ತು ಆರ್ಯಭಟ ಮಾಡುತ್ತಿದ್ದೇವೆ, ವಿಜ್ಞಾನ ಕ್ಷೇತ್ರದಲ್ಲಿ ಮುಂದು ಮುಂದಕ್ಕೆ ಹೋಗುತ್ತಿದ್ದೇವೆ. Can we say, he is of a particular caste, do not put him there ? If you are go back to 200 years who were ruling the society and the Indians. So if you think on these narrow lines, you will be the main person to destroy democracy in the country. And such people are there in the society unfortunately. ಬಸವೇಶ್ವರರ ಕಾಲದಲಿ ಇದನ್ನೇ ಹೇಳಿದ್ದು, ಕಿತ್ತೂರ ಚೆನ್ನಮ್ಮನ ಕಾಲದಲ್ಲಿ ಇದನ್ನೇ ಹೇಳಿದ್ದು, ಪ್ರತಿಯೊಬ್ಬರ ಕಾಲದಲ್ಲಿ ಇದನ್ನೇ ಹೇಳಿದ್ದು. ಇಂಥ

ಜನಗಳ ಕೈಗೆ ದೇಶ ಆಳುವುದಕ್ಕೆ ಅವಕಾಶ ಕೊಡಬಾರದು. ಇವತ್ತು ಸಮಾಜದಲ್ಲಿ ಕೆಲವೊಂದ ವರ್ಗಗಳಿಗೆ ಅನ್ಯಾಯವಾಗಿದೆ, ಅಂತ ಅನ್ಯಾಯಗಳನ್ನು ಸರಿಪಡಿಸಲಿಕ್ಕೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಎಲ್ಲ ಪಕ್ಷದವರೂ ಹಾಕಿಕೊಳ್ಳುತ್ತಾರೆ : ಆದೇ ರೀತಿ ನಮ್ಮ ಪಕ್ಷದವರೂ ಹಾಕಿಕೊಂಡಿದ್ದೇವೆ. ಗುಲ್ಬರ್ಗ, ಬೀದರ್ ರಾಯಚೂರು ಭಾಗದ ವಿದ್ಯಾರ್ಥಿಗಳು ನಮಗೆ ಕೆಲವೊಂದಕೆ ರಿಯಾಯಿತಿಗಳನ್ನು ಕೊಡಬೇಕೆಂದು ಕೇಳುತ್ತಾರೆ : ಆದನ್ನು ಕೊಡಬೇಕಾಗುತ್ತೆ. ಪಟ್ಟಣದಲ್ಲಿರತಕಾವರಿಗೆ ಸ್ವಲ್ಪ ಅನುಕೂಲವಾಗಿದೆ, ಕಡಿಮೆ ಮಾಡಬೇಕೆಂದು ಹೇಳುತ್ತಾರೆ, ಅದನ್ನು ಮಾಡಬೇಕಾಗುತ್ತದೆ ಹೀಗೆ ಆಗಿರುವಂತ ಅನ್ಯಾಯಗಳನ್ನು ತೊಲಗಿಸಿಕ್ಕೆ ಕಾರ್ಯಕ್ರಮ ಕೈಗೊಳ್ಳಬೇಕೇ ಹೊರತು, ಕಾಮಧೇನುವಿನಿಂದ ಹಾಲನ್ನು ತೆಗೆದುಕೊಂಡು ಎಲ್ಲರಿಗೂ ಹಂಚಲಿಕ್ಕೆ ಪ್ರಯತ್ನ ಮಾಡಬೇಕೇ ಹೊರತು, ಕಾಮಧೇನುವನ್ನು ಕತ್ತರಿಸುವುದು ಸರಿಯಲ್ಲ. They are the traitors I am telling you. If there is a danger for the democracy, if the very existence of the society is in danger, where are we going ? That is most important. ಇವತ್ತು ಕೋಳಿ ಚಿನ್ನದ ಮೊಟ್ಟೆ ಇಡುತ್ತದೆಂದು ಕೋಳಿಯನ್ನೇ ಕತ್ತರಿಸುವುದು ಬೇಡ. ಇಟ್ಟಂತ ಮೊಟ್ಟೆಗಳನ್ನು ಹಂಚಿಕೊಳುವುದಕ್ಕೆ ಪ್ರಯತ್ನ ಮಾಡೋಣ. ಇವತ್ತು ಕೋಳಿಯನ್ನೇ ಕತ್ತರಿಸುವಂತ ಒಂದು ವರ್ಗ ಜನ ಏನಿದ್ದಾರೆ. ಅಂತ ವರ್ಗದ ಜನರನ್ನು ಈ ಸಮಾಜ ಖಂಡಿಸಬೇಕು, ರಾಜಕೀಯ ಪಕ್ಷಗಳು ಖಂಡಿಸಬೇಕು. They should not talk to such people. I am requesting all the politicai party people. As I have earlier said the power and the Chief Ministership or the Cabinet are not our grand father's property. It is not signed. It is not a Will left by my father that my son should become the Chief Minister. It is the party and the people who elect the persons to power and ultimately we have to work together. I request all the opposition parties and our people not to encourage such people. Do not encourage such traitors in the society. Talking on caste basis, they are trying to demolish democracy. They are trying to destroy democracy in the country. It cannot happen. Lakhs and Lakhs of people have died and particularly many stalwarts have gone to jail. They have given their lives. Chandrashekhar Azad is a Brahmin, Is Chandrashekhar Azad important or his caste is important, or his performance is important ? He is the man who is responsible to create the Quit India Movement and shot many British people. Bhagat Singh, Lokamanya Tilak Dhadha Bhai Naoroji, Deshapande, like that how many people have sacrificed their lives for the independence ; Have they sacrificed because of the caste ? Still after 30 years are we hearing on the caste basis ? How long we are going to-day ? Where are we landing to-day ? Can you think about the country after some time ? Unless you have a strong leader .....

ಶ್ರೀ ಹೆಚ್. ಡಿ. ದೇವೇಗೌಡ,—ನೊನ್ನೆ ಪತ್ರಿಕೆಯಲ್ಲಿ ಓದಿದ್ದೇನೆ. ನಿಮ್ಮ ಪಕ್ಷದ ಮುಖಂಡರು ಹೇಳಿದ್ದಾರೆ. ಹಿಂದುಳಿದ ವರ್ಗಗಳ ರಿಸರ್ವೇಶನ್ ಬಗ್ಗೆ ಚಳುವಳಿ ಮಾಡುವುದರ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

SRI R. GUNDU RAO.—They go by the national spirit. That is what I am telling. ಹಿಂದುಳಿದ ಜಾತಿ, ಮುಂದುವರಿದ ಜಾತಿ ಬಗ್ಗೆ ಅವರು ಹೇಳಿದ್ದಾರೆ. ಜಾತಿಯ ಬುಟ್ಟಿಯನ್ನು ಹಿಡಿದುಕೊಂಡು ತಿರುಗಾಡುವವರು ಜಾಸ್ತಿಯಾಗಿದ್ದಾರೆ. ಇವತ್ತು ಊರು

ಊರೇ ಜಾತಿ, ಮನೆ ಮನೆಯೊಳಗೆ ಜಾತಿ, ಮದುವೆಗೆ ಜಾತಿ, ನಾಮಕರಣಕ್ಕೆ ಜಾತಿ, ಸತ್ತರೆ ಜಾತಿ, ಹೆಣ ಹೊರಲಿಕ್ಕೆ ಜಾತಿ, ಇವತ್ತು ಈ ಜಾತಿಯನ್ನು ತಪ್ಪಿಸದೇಹೋದರೆ ಹೇಗೆ ? Is it the way of building national integrity ? Is that the way how we are building national love ? That is why I am telling that we have to go forward in that direction and we have to do. ಅದಕ್ಕೋಸ್ಕರ ಸಮಾಜದ ಎಲ್ಲರ ಸಹಕಾರ ಕೇಳುತ್ತೇನೆ, ಸರ್ಕಾರದಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವಾಗ, ಕೆಲವು ತಪ್ಪುಗಳು ಆಗಿರಬಹುದು. I am prepared to admit. There may be some lapses, because the system is such. There will be no evidence. Nobody will come forward. ಆದಕ್ಕಿತ ನಡೆಸಬೇಕಾದರೆ, ಎಲ್ಲರ ಸಹಕಾರ, ಸಮಾಜದ ಸಹಕಾರ, ಶಾಸಕರ ಸಹಕಾರ. ಎಲ್ಲ ಪಕ್ಷದವರ ಸಹಕಾರ ಬೇಕು. ಒಂದು ಸಂಪ್ರದಾಯವನ್ನು ಇಟ್ಟು ಕೊಳ್ಳೋಣ ಚುನಾವಣೆ ಬಂದಾಗ ಪಕ್ಷದ ತತ್ವದ ಮೇಲೆ, ಸಾಧನೆ ಮೇಲೆ, ನೀತಿಯ ಮೇಲೆ ಮಾತ ನಾಡೋಣ. ವೈಯಕ್ತಿಕವಾಗಿ ಟೀಕೆ ಮಾಡುವುದು ಸರಿಯಲ್ಲ. ಈ ರೀತಿಯ ಒಂದು ಸತ್‌ಸಂಪ್ರ ದಾಯವನ್ನು ಹಾಕಿಕೊಂಡು, ಬೇರೆ ರಾಜ್ಯದಲ್ಲಿ ಪ್ರಯತ್ನ ಮಾಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. In Karnataka let us start type of healthy propaganda. Let us start in that direction. Let us move in that direction.

ಶ್ರೀ ಭೀಮಣ್ಣ ಖಂಡ್ರೆ,-- ಶ್ರೀಮತಿ ಇಂದಿರಾಗಾಂಧಿಯವರು ಒಂದು ಮಾತು ಹೇಳಿದ್ದಾರೆ. 'You do not say backward. You please say Indian,. On 22nd November 1978 in Bihar Smt. Indira Gandhi has declared that the reservation on caste will create disturbances in the country. So it must go. ಎನ್ನುತಕ್ಕ ಮಾತನ್ನು ಹೇಳಿದ್ದಾರೆ.

ಶ್ರೀ ಆರ್. ಗುಂಡುರಾವ್..—ಆದ್ದರಿಂದ ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿಕೊಂಡು ಹೋಗೋಣ. ಇವತ್ತು ಎಲೆಕ್ಷನ್ ಬಂದಾಗ ನೀವು ಪ್ರಚಾರ ಮಾಡಬೇಕು, ನಾವು ನೀವು ಜೊತೆಯಲಿಯೇ ಕೂತುಕೊಳ್ಳಬೇಕು. ವೈಯಕ್ತಿಕ ಟೀಕೆಗಳನ್ನು ಆದಷ್ಟು ಕಡಿಮೆ ಮಾಡೋಣ. ಆದರಿಂದ ಉಭಯತ್ರರಿಗೂ ಲಾಭ ಇಲ್ಲ. ಕೆಲವೊಂದು ನಾರ್ಮ್ಸ್ ಹಾಕಿಕೊಳ್ಳೋಣ. Because, Election also comes under the Chief Minister's portfolio, I am just referring one or two points. Let us start from Karnataka..... ನಮ್ಮ ಪಕ್ಷದ ನೀತಿಯ ಬಗ್ಗೆ ಟೀಕೆ ಮಾಡಿ, ಸಾಧನೆ ಬಗ್ಗೆ ಟೀಕೆ ಮಾಡಿ, ಈ ಪಕ್ಷಕ್ಕೆ ಏತಕ್ಕೆ ಓಟು ಕೊಡ ಬಾರದು ಎಂದು ಹೇಳುವುದರ ಬಗ್ಗೆ ಟೀಕೆ ಮಾಡಿ, ಈ ಪಕ್ಷಕ್ಕೆ ಮತ ಕೊಟ್ಟರೆ ಏನು ಪ್ರಯೋಜನ ವಾಗುತ್ತೆ ಎನ್ನುವುದರ ಬಗ್ಗೆ ಟೀಕೆ ಮಾಡಿ, ವೈಯಕ್ತಿಕವಾಗಿ ಟೀಕೆ ಮಾಡುವುದು ಸರಿಯಲ್ಲ. ನಾವು ನೀವು ಜೊತೆಯಲ್ಲಿ ಊಟ ಮಾಡುತ್ತೇವೆ, ಕಾಫಿ ಕುಡಿಯುತ್ತೇವೆ, ವೇದಿಕೆಯಂ ಮೇಲೆ ವೈಯಕ್ತಿಕವಾಗಿ ಟೀಕೆ ಮಾಡುವುದರಿಂದ ಯಾವ ರೀತಿಯ ಪ್ರಯೋಜನವೂ ಇಲ್ಲ. ನಮ್ಮ ರಾಜ್ಯದಲ್ಲಿ ನಮ್ಮ ಪಕ್ಷದ ಪರವಾಗಿ ನಾನು ರೆಡಿಯಿದ್ದೇನೆ. On behalf of our party we are ready. We are prepared to go in that line. Let there be a healthy propaganda ; and not stone throwing at each other. This can be done by anybody This is a norm. There is no law for it to prevent. It is only by mutual understanding, by mutual co-operation and by mutual thinking we can do such things. ಈ ರೀತಿ ಎಲೆಕ್ಷನ್ ಬಂದಾಗ ಮಾತನಾಡಿಕೊಂಡು ಕೆಲಸ ಮಾಡೋಣ. We can be proud. ನಮ್ಮ ಪಕ್ಷ ಗೆದ್ದರೆ ಎಷ್ಟು ಸಂತೋಷ ಪಡುತ್ತೇವೊ ಅಷ್ಟೇ ಸಂತೋಷದಿಂದ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. That is also a spirit. That is what Smt. Indira Gandhi said in 1977 when she lost the election. She said 'Yes, people have defeated me. I accept my defeat'. Yes, suppose we lose tomorrow we accept our defeat. If we win we will accept that also.

That is also a spirit, That is what Mrs. Indria Gandhi said in 1977 when she lost the election, People defeated her. I accept it. Suppose we lose tomorrow, we accept that defeat. If it is the end, we will accept that also. But ultimately, ನಮ್ಮ ದೇಶದ ಪ್ರಭುಗಳು ಯಾರು ಅಂದರೆ ಮತದಾರರು, ಸಾರ್ವಜನಿಕರು, ಅವರು ಕೊಟ್ಟಿದ್ದಕ್ಕೆ ತಲೆಬಾಗಿ ಹೋಗೋಣ. ನಮ್ಮಲ್ಲಿ ರಿಫಾರಮ್ಸ್ ಆಗಬೇಕು, ಈಗ ತಾವು ತಪ್ಪು ನಡೆದಿದೆ ಎಂದು ಹೇಳಿದ್ದೀರಿ. ಆದನ್ನು ನಾನು ತಡೆಗಟ್ಟಲಿಕ್ಕೆ ತಯಾರಿದ್ದೇನೆ. ತಾವು ಈಗ ಏನು ಹೇಳಿದ್ದೀರಿ ಅದರ ಬಗ್ಗೆ ಕೂಡಲೇ ಪರಿಶೀಲನೆ ಮಾಡಿ ಎಲ್ಲಿ ಕ್ರಮ ತೆಗೆದು ಕೊಳ್ಳಬೇಕೋ ಅಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ತದ್ಮೇಗೂ ಕೂಡ ಪುನಃ ಚರ್ಚೆ ಮಾಡಲಿಕ್ಕೆ ಬೇಕಾದಷ್ಟು ಅವಕಾಶ ಇದೆ. It is not that anything which is coming to your notice that you should speak only on the floor of the House. you have a right to say that this the wrong thing that is going on and you can come and meet me and discuss this is the wrong thing, which should be set right. We are bound to do that and we must examine, and will do that. ನಾವೆಲ್ಲ ಸತ್ಯ ಹರಿಶ್ಚಂದ್ರರಾಗಿ ಮಾಡಿದ್ದೇವೆಂದು ಹೇಳುವ ಪನು ನಾನಲ್ಲ. ಆದರೆ ಆ ಒಂದು ಮಾರ್ಗದಲ್ಲಿ ನಾವು ಹೋಗಲಿಕ್ಕೆ ಸರ್ವ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿದೆ. ಆ ಪ್ರಯತ್ನಕ್ಕೆ ತಮ್ಮೆಲ್ಲರ ಸಹಕಾರ ಬೇಕು ಎಂದು ಹೇಳುತ್ತೇನೆ. ಇನ್ನು ಸಿ.ಒ.ಡಿ.ಯ ಬಗ್ಗೆ ತಾವೆಲ್ಲರೂ ಮಾತನಾಡಿದ್ದೀರಿ. ಇವೊತ್ತು ಟ್ರಾನ್ಸ್‌ಫರ್‌ಗಳು ಆಗುತ್ತವೆ, ಹೋಗುತ್ತವೆ, ಪೋಲೀಸ್ ಇಲಾಖೆ ಬಹಳ ಮಹತ್ತರವಾದ ಇಲಾಖೆ, ಆ ಇಲಾಖೆ ಯಾವುದೇ ಸರ್ಕಾರ ಬರಲಿ, ಲಾಯಲ್ ಆಗಿ, ಕಾನ್‌ಸ್ಟಿಟ್ಯೂಷನ್‌ಗೆ ಲಾಯಲ್ ಆಗಿ ಸರ್ಕಾರವನ್ನು ಯಾವ ಪೇಜಿಗೂ ಸಿಕ್ಕಿಸುವಂತೆ ಯಾರೂ ಮಾಡಬಾರದು. ಅದು ಯಾರೇ ಮಾಡಿರಲಿ ಕಾರ್ಯನಿರ್ವಹಣೆಯಲ್ಲಿ ತೊಂದರೆಯಾಗುತ್ತದೆ. ನಮಗೆ ಆ ಉದ್ದೇಶ ಇಲ್ಲ. ನಾಳೆ ಒಬ್ಬರು ರಿಟೈರ್ ಆಗುತ್ತಾರೆ, ಅಥವಾ ಒಬ್ಬರು ಟ್ರಾನ್ಸ್‌ಫರ್ ಆಗುತ್ತಾರೆ, ಬೇರೊಬ್ಬರು ಆ ಸ್ಥಳಕ್ಕೆ ಬರುತ್ತಾರೆ, ಅದೆಲ್ಲಾ ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ವಿಚಾರ. ಹಾಗೇನಾದರೂ ಅನ್ಯಾಯವಾಗಿದ್ದರೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಇದೆ. ನಮ್ಮ ಸರ್ಕಾರಕ್ಕೆ ಅಪೀಲು ಮಾಡುವ ಅವಕಾಶ ಇದೆ. ಪೋಲೀಸ್ ಇಲಾಖೆಯ ಬಗ್ಗೆ ಹೇಳಬೇಕು ಎಂದರೆ ನಾವು ಬಂದ ಮೇಲೆ ಪೋಲೀಸ್ ಇಲಾಖೆಗೆ ಸಾಕಷ್ಟು ಸಪೋರ್ಟ್ ಮಾಡಿದ್ದೇವೆ. ಬೇರೆ ಯಾರೂ ಮಾಡಿರಲಿಲ್ಲ. ಎಷ್ಟೋ ವರ್ಷಗಳಿಂದ ಅಲ್ಲಿ ಪ್ರಮೋಷನ್‌ಗಳು ಆಗಿರಲಿಲ್ಲ. ಸಬ್‌ಇನ್ಸ್‌ಪೆಕ್ಟರ್‌ನಿಂದ ಸರ್ಕಲ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ನಿಂದ ಡಿ.ವೈ.ಎಸ್.ಪಿ. ವರೆಗೆ ಡಿ.ವೈ.ಎಸ್.ಪಿ ಯಿಂದ ಎಸ್.ಪಿ. ಪ್ರಮೋಷನ್‌ಗಳು ಬಹಳ ವರ್ಷಗಳಿಂದ ನಾನಾ ಕಾರಣಗಳಿಂದ ಆಗಿರಲಿಲ್ಲ. ನಾವು ಬಂದಮೇಲೆ ಯಾವುದನ್ನು ನಿಲ್ಲಿಸಿಲ್ಲ. ಯಾರು ಯಾರಿಗೆ ಪ್ರಮೋಷನ್ ಕೊಡಬೇಕಾಗಿತ್ತು ಅವರಿಗೆಲ್ಲಾ ಪ್ರಮೋಷನ್ ಕೊಟ್ಟಿದ್ದೇವೆ. ಅವರ ಮೆರಿಟ್ ಪ್ರಕಾರ, ಅವರ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ ಪ್ರಕಾರ ಪ್ರಮೋಷನ್‌ಗಳನ್ನು ಕೊಡಬೇಕಾದ್ದನ್ನು ಕೊಟ್ಟಿದ್ದೇವೆ. ಇನ್ನು ಹೊಸದಾಗಿ ಇವೊತ್ತು ನಮ್ಮ ರಾಜ್ಯದಲ್ಲಿ ಯಾರು ಉತ್ತಮವಾದಂಥ ಕೆಲಸವನ್ನು ಮಾಡುತ್ತಾರೆ ಅಂತಹವರಿಗೆ ಚೀಫ್ ಮಿನಿಸ್ಟರ್ ಗೋಲ್ಡ್ ಮೆಡಲ್ ಇಟ್ಟು ಅವರಿಗೆ ಕೊಡಬೇಕೆಂದು ಮಾಡಿದ್ದೇವೆ. ಅವರು ಯಾವ ಮಟ್ಟದ ಅಧಿಕಾರಿಗಳೆ ಆಗಿರಲಿ, ಅವರು ಎಸ್.ಪಿ. ಆಗಿರಬಹುದು, ಡಿ.ವೈ.ಎಸ್.ಪಿ. ಆಗಿರಬಹುದು ಯಾರೇ ಆಗಿದ್ದರೂ ಕೂಡ ಉತ್ತಮವಾಗಿ ಕೆಲಸ ಮಾಡಿದಂಥ ಅಧಿಕಾರಿಗಳು ಚೀಫ್ ಮಿನಿಸ್ಟರ್ ಮೇಡಲ್ ಪಡೆದುಕೊಳ್ಳಲಿಕ್ಕೆ ಅವಕಾಶ ಇದೆ. ಅದನ್ನು ಫಾರೆಸ್ಟ್ ಇಲಾಖೆಯಲ್ಲೂ ಕೂಡ ಕೊಡಬೇಕೆಂದು ಮಾಡಿದ್ದೇವೆ. ಇವೊತ್ತು ಫಾರೆಸ್ಟ್ ಇಲಾಖೆಯಲ್ಲಿ ಸ್ಪೆಷಲ್ ಸ್ಕ್ವಾಡ್ ನೇಮಕ ಮಾಡಿದ ಮೇಲೆ ಕಳ್ಳತನದಿಂದ ಸಾಗಾಣಿ ಕೆಯಾಗಂತ್ತಿದ್ದಂಥ ಮರದ ಸಾಮಾನುಗಳನ್ನು ಕೋಟಿಗಟ್ಟಲೆ ಹಿಡಿದಿದ್ದಾರೆ. ಸುಮಾರು ಆರವತ್ತು ಲಕ್ಷ ರೂಪಾಯಿ ಗಂಧದ ಮರವನ್ನು ಈಗಾಗಲೇ ಹಿಡಿದಿದ್ದಾರೆ. ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಬೆಂಗಳೂರು ಈ ಭಾಗದಲ್ಲಿ ಈ ಸ್ಕ್ವಾಡ್ ಏನು ಕೆಲಸ ಮಾಡುತ್ತಿದ್ದಾರೆ, ತಮಗೆ ಗೊತ್ತಿರುವ ಹಾಗೆ ಆರ್ಥಿಕ ಪರಿಸ್ಥಿತಿಯಿಂದ ಅವರಿಗೆ ಹೆಚ್ಚಿಗೆ ಹಣವನ್ನು ಪೂರ್ತಿಕೊಡಲಿಕ್ಕೆ ಆಗಿಲ್ಲ. ಇನ್ನೂ ಎಕ್ವಿಪ್‌ಮೆಂಟ್ ಕೊಡಬೇಕಾಗಿದೆ. ಕೇರಳಾ ಬಾರ್ಡರ್‌ಲ್ಲಿ ಪೂರ್ತಿ ಕಾಡು ಇದೆ. ಅರ್ಧ ಕೇರಳಾ ಅರ್ಧ ಕರ್ನಾಟಕ, ಅಲ್ಲಿ ಹೋಗಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಅವರಿಗೆ ವೈರ್‌ಲೆಸ್ ಸೆಟ್ಟು, ಕ್ವಾರ್ಟರ್ಸ್,

ಗಳನ್ನು, ಒಳ್ಳೆಯ ವೆಪನ್ಸ್‌ಗಳನ್ನು ಕೊಟ್ಟು ವೆಹಿಕಲ್ಸ್ ಕೊಟ್ಟು ಅಲ್ಲಿ ಸೈಗಲ್ ಆಗತಕ್ಕದ್ದನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಇನ್ನು ಫುಡ್ ಸೆಲ್‌ನಲ್ಲಿಯೂ ಕೂಡ ಎರಡೂವರೆ ಕೋಟಿ ರೂಪಾಯಿಗೂ ಮಿಗಿದಂತೆ ಈ ಆಕ್ರಮ ದಾಸ್ತಾನ್ನು ಪೋಲೀಸರು ಹಿಡಿದಿದ್ದಾರೆ. ಹಾಗೆ ಎಲ್ಲಾ ಇಲ್ಖೆಗಳಲ್ಲೂ ಕೂಡ ಒಳ್ಳೆಯ ಕೆಲಸ ಮಾಡಿದ್ದಾರೆ. ಸರ್ಕಾರ ಜನತೆಗೆ ಒಳ್ಳೆಯದಾಗಬೇಕೆಂಬ ದೃಷ್ಟಿಯಿಂದ ಕೆಲಸ ಮಾಡುತ್ತಿದೆ. ಒಳ್ಳೆಯ ಅಧಿಕಾರಿಗಳ ಕೈ ಬಲಪಡಿಸುವುದು ಸರ್ಕಾರದ ಕರ್ತವ್ಯ. ಅವರೆಲ್ಲರಿಗೂ ಏನೇನು ಹೆಚ್ಚಿನ ಸ್ಥಾನಮಾನಗಳನ್ನು ಕೊಡಬೇಕು ಅದನ್ನು ಕೊಡಲಿಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಸಮ್ಮ ಮಾನ್ಯ ಸದಸ್ಯರು ಪೋಲೀಸ್ ಇಲಾಖೆಯ ಬಗ್ಗೆ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ವಿಚಾರವನ್ನು ಪ್ರಕ್ತಪಡಿಸಿದರು. ಮಾನ್ಯ ಚಂದ್ರಶೇಖರ್ ಅವರು ವಿಧಾನ ಸೌಧದ ಸುತ್ತಲೂ ಬಲವಾದ ಪೋಲೀಸ್ ಹಾಕಿರುವ ಬಗ್ಗೆ ಪ್ರಸ್ತಾಪ ಮಾಡಿದರು. ಅದಕ್ಕೆ ಕಾರಣ ಇಷ್ಟೇ, ಆದು ಯಾವುದೇ ಸಾಮಾನ್ಯ ಜನರಿಗೊಸ್ಕರ ಅಲ್ಲ. ಇವೊತ್ತು ರಾಜಕೀಯ ಪಕ್ಷದ ಜನರು ಕಾನೂನನ್ನು ತಾವು ತಿಳಿದುಕೊಂಡು ಅದನ್ನು ಅಸಂರಿಸುವುದಾದರೆ ಇಲ್ಲಿಯಾರಿಗೂ ಪೋಲೀಸ್ ಬೇಕಾಗಿಲ್ಲ ವಿಧಾನ ಸೌಧದ ಬಳಿ ಪೋಲೀಸ್ ಏತಕ್ಕೆ ಬರಬೇಕಾಯಿತು ರಾಜಕೀಯ ಪಕ್ಷಕ್ಕೆ ಸೇರಿದಂಥವರು ಕೆಲವು ಆಯೆಂಧಗಳನ್ನು ಇಟ್ಟುಕೊಂಡು ಮುಖ್ಯ ಮಂತ್ರಿಗಳನ್ನು ನೋಡಲಿಕ್ಕೆ ಬರುತ್ತಿದ್ದೇವೆಂದು ಅಪಾಯಿಂಟ್‌ಮೇಂಟ್ ತೆಗೆದುಕೊಂಡು, ೧೦-೨೦ ಜನರು ಚೀಫ್ ಮಿನಿಸ್ಟರ್ ನೋಡಲಿಕ್ಕೆ ಬರುತ್ತಾರೆ. ಚೀಫ್ ಮಿನಿಸ್ಟರ್ ನೋಡಲಿಕ್ಕೆ ಬಂದ ತಕ್ಷಣವೇ, ತಮ್ಮ ಘೋಷಣೆಗಳನ್ನು ಕೂಗಲಿಕ್ಕೆ ಪ್ರಾರಂಭ ಮಾಡುತ್ತಾರೆ. ವಿಧಾನ ಸೌಧದಲ್ಲಿ ಯಾವುದೇ ತರಹ ಗಲಾಟೆ ಮಾಡಬಾರದು ಎನ್ನುವುದು ಇದ್ದರೂ ಕೂಡ ಎಲ್ಲಾ ಕಡೆಯಿಂದ ಬಂದು ನುಗ್ಗಿ ಗಲಾಟೆ ಮಾಡುವಂಥ ಪ್ರವೃತ್ತಿ ಯಾವಾಗ ಜಾಸ್ತಿಯಾಗುತ್ತದೆ ಆಗ ಪೋಲೀಸರು ಬರಲೇ ಬೇಕಾಗುತ್ತದೆ. ನೀವೇ ಇಲ್ಲಿ ಬಂದು ಕುಳಿತುಕೊಂಡಿದ್ದರು, ಸಹ ಪೋಲೀಸರನ್ನು ಕರಸಲೇ ಬೇಕಾಗುತ್ತದೆ. ಇದು ಸಾರ್ವಜನಿಕರಿಗೆ ಸೇರಿದಂಥ ಆಸ್ತಿ ಪ್ರತಿಯೊಬ್ಬರಿಗೂ ಸೇರಿದಂಥ ಆಸ್ತಿಯನ್ನು ರಕ್ಷಣೆ ಮಾಡತಕ್ಕದು ಸರ್ಕಾರದ ಕರ್ತವ್ಯ. We should not undermine the authority, we should not undermine Vidhan Soudha, we should not undermine the Assembly and we should not undermine anything which is going to end in a very disastrous manner. ಆದ್ದರಿಂದ ರಕ್ಷಣೆ ಬೇಕಾಗುತ್ತದೆ. ಒಟ್ಟಿಗೆ ೨೫ ಜನ ಬಂದು ಯಾರ ಮನೆಗೆ ಆಗಲಿ, ಅಥವಾ ಯಾವ ಮೆನಿಸ್ಟರ್ ಚೇಂಬರ್ ಆಗಲಿ ನುಗ್ಗಲಿಕ್ಕೆ ಪ್ರಯತ್ನ ಮಾಡಿದರೆ ಆವಾಗ ರಕ್ಷಣೆಯನ್ನು ಕೊಡಲೇಬೇಕಾಗುತ್ತದೆ ಈಗ ಪ್ರಾಹಿಬಿಟರಿ ಆರ್ಡರ್ ಹಾಕಿರುತ್ತೇವೆ, ಮೊದಲು ಅಲ್ಲಿಯವರೆಗೆ ಬರುತ್ತೇವೆಂದು ಹೇಳುತ್ತಾರೆ. ಹಾಗೆ ಯಾವುದೋ ನೆಪದಲ್ಲಿ ಸುತ್ತ ನುಗ್ಗಲಿಕ್ಕೆ ಪ್ರಯತ್ನ ಮಾಡುತ್ತಾರೆ. ಇವೊತ್ತು ಪಾರ್ಲಿಮೆಂಟಿಗೂ, ವಿಧಾನ ಸೌಧಕ್ಕೂ ಪೃತ್ಯಾಸ ಏನು ಎಂದರೆ, ಡೆಲ್ಲಿ ಪಾರ್ಲಿಮೆಂಟನಲ್ಲಿ ಸುತ್ತ ನಾಲ್ಕೈದು ಗೇಟ್ ಇಟ್ಟಿರುವುದರಿಂದ ಆ ಗೇಟಿನ ಮುಖಾಂತರ ಬರಬೇಕಾಗಿದೆ. ನಮ್ಮ ವಿಧಾನಸೌಧದಲ್ಲಿ ಆ ತರಹ ಇಲ್ಲ. ಯಾವ ಕಡೆಯಿಂದ ಬೇಕಾದರೂ ಬರಬಹುದು. ನಾನಾ ಕಾರಣಗಳಿಂದ, ಬೆಂಗಳೂರು ನಗರದಲ್ಲಿ ಕಾಲ ಬಂದ ಹಾಗೆ, ಮುಷ್ಕರ ಚಳುವಳಿ ಜಾಸ್ತಿಯಾಗಿವೆ. ಆದರೆ ಅವರು ಅದನ್ನು ಅಲ್ಲಿಗೆ ಮಿತಿಗೊಳಿಸಿದರೆ ಪರವಾಯಿಲ್ಲ. ನೇರವಾಗಿ ವಿಧಾನ ಸಭೆಗೆ, ವಿಧಾನಪರಿಷತ್ತಿಗೆ ನುಗ್ಗುವಂಥ ಕಾರ್ಯಕ್ರಮ, ಮಂತ್ರಿಗಳ ಚೇಂಬರ್‌ಗೆ ಹೋಗುವ ಕಾರ್ಯಕ್ರಮ, ವಿಧಾನ ಸೌಧಕ್ಕೆ ಕಲ್ಲು ಹೊಡೆಯತಕ್ಕ ಕಾರ್ಯಕ್ರಮ ಹಾಕಿಕೊಂಡರೆ, ಅದನ್ನು ಯಾವುದೇ ಸರ್ಕಾರ ನೋಡಿಕೊಂಡು ಇರಲಿಕ್ಕೆ ಸಾಧ್ಯವಿಲ್ಲ. ಅವರಿಗೆ ರಕ್ಷಣೆ ಕೊಡಬೇಕಾಗುತ್ತದೆ. ರಕ್ಷಣೆ ಕೊಡತಕ್ಕದು ಸರ್ಕಾರದ ಕರ್ತವ್ಯ. ಮೊನ್ನೆ ಲೆಜಿಸ್ಲೇಟರ್ಸ್ ಹೋಂನಲ್ಲಿ ಗಲಾಟೆ ಆಯಿತು ನಾವಯವಾಗಿ ಲೆಜಿಸ್ಲೇಟರಿರ್ಸ್ ಹೋಂಗೆ ಪೋಲೀಸ್ ಹಾಕಬಾರದು ಅಲ್ಲಿ ಪೋಲೀಸ್ ಸ್ಟೇಷನ್ ತೆರೆದಿದ್ದೇವೆ. ಅಲ್ಲಿ ಬಿಲ್ಡಿಂಗ್ ದೊಡ್ಡದಾಗಿರುವುದರಿಂದ ಪ್ರತಿದಿವಸ ಅಲ್ಲಿ ಸಾವಿರಾರು ಜನರು ಬಂದು ಹೋಗುವಂತಾದ್ದು ಇದೆ. ಈ ತರಹ ಪರಿಸ್ಥಿತಿ ಬರುತ್ತದೆ ಎನ್ನುವುದು ಗೊತ್ತಿದ್ದರೆ ಬೇರ ಕಡೆ ಬಿಲ್ಡಿಂಗ್ ಕಟ್ಟಬಹುದಿತ್ತು. ಈಗ ಲೆಜಿಸ್ಲೇಟರ್ಸ್‌ಹೋಂ ಬಹಳ ದೊಡ್ಡದಾಗಿದೆ. ಬೇಕಾದಷ್ಟು ಜನ ಅಲ್ಲಿಗೆ ಬರುತ್ತಾರೆ, ಅಲ್ಲಿಗೆ ಯಾರು ಬರುತ್ತಾರೆ, ಯಾರು ಹೋಗುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಅಲ್ಲಿಗೆ ಒಳ್ಳೆಯವರು ಬರುತ್ತಾರೆ. ಕೆಟ್ಟವರು ಬರುತ್ತಾರೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಇವೊತ್ತು ಅಲ್ಲಿಗೆ ಒಳ್ಳೆಯವರು ಬಂದಾಗಲೆ, ಅವರ ಮೇಲೆ ಅನುಮಾನಪಟ್ಟು ಹಿಡಿದರು ಅಂತ ಇಟ್ಟುಕೊಳ್ಳೋಣ, ಅವರು ಮಾನ್ಯ ಸದಸ್ಯರಾದ ಬೊಮ್ಮಾಯಿ ಅವರಿಗಾಗಲಿ, ಮಾನ್ಯ

ದೇವೇಗೌಡರಿಗೆ ಆಗಲಿ ಬೇಕಾಬಿಟ್ಟಿಯವರಾಗಿದ್ದಾರೆ ಬಹಳ ಬೇಜಾರಾಗುತ್ತದೆ. ಆದೇ ಪ್ರಕಾರ ಇನ್ನೊಬ್ಬ ಕಳ್ಳ ಬಂದಾಗಲೂ ಅವನ ಮೇಲೆ ಅನುಮಾನ ಇಲ್ಲದೇ ಬಿಟ್ಟುಬಿಡಬಹುದು. ಈ ತರಹ ಪರಿಸ್ಥಿತಿ ಅಲ್ಲಿ ಬಂದಿದೆ. ಇವೊತ್ತು ಕಾನೂನು ದೃಷ್ಟಿಯಿಂದ ವೈಯಕ್ತಿಕವಾಗಿ ತೊಂದರೆ ಮಾಡಬೇಕೆಂಬ ದೃಷ್ಟಿಯಿಂದ ಅಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಎಲ್ಲರ ರಕ್ಷಣೆ ಮಾಡಲಿಕ್ಕೆ ಪೋಲೀಸ್ ಇರಲೇ ಬೇಕಾಗುತ್ತದೆ. ಇವೊತ್ತು ಮುಷ್ಕರ ಮಾಡಿಕೊಂಡು ಬಂದವರು ಕಬ್ಬನ್ ಪಾರ್ಕ್ ಹತ್ತಿರವೇ ನಿಂತುಕೊಂಡರೆ ಆಗ ಯಾವ ಪೋಲೀಸರು ಬೇಕಾಗುವುದಿಲ್ಲ. ಅದೇ ವಿಧಾನ ಸೌಧ ನುಗ್ಗಲಿಕ್ಕೆ ಪ್ರಯತ್ನ ಮಾಡಿ, ವಿಧಾನ ಸೌಧದಲ್ಲಿ ಬಂದು ಮೇಲಿನ ಮಹಡಿಯಿಂದ ಕೆಲವು ಅಹಿತಕರ ಘಟನೆಗೆ ಏರ್ಪಾಡು ಮಾಡಿದ್ದರಿಂದ, ಈ ತರಹ ಪೋಲೀಸ್ ಬಂದೋಬಸ್ತು ಹಾಕಿದ್ದೇವೆ ಹೊರತು ಬೇರೆ ಯಾವುದಕ್ಕೂ ಅಲ್ಲ. ಇನ್ನು ಮಾನ್ಯ ಸದಸ್ಯರಾದ ಚಂದ್ರಶೇಖರ್ ಅವರು ಮಂತ್ರಿಗಳ ಹಿಂದೆ ಕಾರುಗಳು ಹೋಗುತ್ತಿವೆ ಎಂದು ಹೇಳಿದರು. ಹಿಂದೆ ಇದ್ದ ಪರಿಸ್ಥಿತಿಗೂ ಇವೊತ್ತು ಇರತಕ್ಕ ಪರಿಸ್ಥಿತಿಗೂ ವ್ಯತ್ಯಾಸವನ್ನು ಸಾಮಾನ್ಯರೂಪಿಕವಾಗಿ ಕಾಣುತ್ತಿದ್ದೇವೆ. ಇವೊತ್ತು ಒಂದು ಬಸ್ಸು ಯಾವುದೋ ಕಾರಣದಿಂದ ಕೆಟ್ಟು ನಿಂತಿರುತ್ತದೆ, ಟೈರ್ ಪಂಚರ್ ಆಗಿಯೋ, ಯಾವುದೋ ಕಾರಣದಿಂದ ನಿಂತಿರುತ್ತದೆ. ಅಲ್ಲಿ ಜನರು ಕಾಯುತ್ತಾ ಇರುತ್ತಾರೆ. ಆ ಒಂದು ಪ್ರದೇಶಕ್ಕೆ ಯಾರಾದರೂ ಮಂತ್ರಿಗಳ ಕಾರು ಅಲ್ಲಿ ಹೋದರೆ ಸಾಕು ಕಲ್ಲು ಹೊಡೆಯಲಿಕ್ಕೆ ಪ್ರಾರಂಭ ಮಾಡುವುದು. ಈ ರೀತಿ ಆದರೆ ಹೇಗೆ ಮಾಡಬೇಕು. ಇವೊತ್ತು ಸಿಟಿ ಪ್ರದೇಶದಲ್ಲಿ ಕಾರ್ಮಿಕರ ಗಲಾಟೆ ಇರುತ್ತದೆ. ಅಥವಾ ಹೋಟೆಲ್ ಕಾರ್ಮಿಕರು ಗಲಾಟೆ ಮಾಡುತ್ತಾರೆ. ಅಲ್ಲಿಗೇನಾದರೂ ಮಂತ್ರಿಗಳ ಕಾರು ಹೋದರೆ, ಇದಕ್ಕೆಲ್ಲಾ ಸರ್ಕಾರವೇ ಕಾರಣ, ಹೋಟಲು ಯಜಮಾನ ದುಡ್ಡು ಕೊಡಲಿಲ್ಲ ಅಂದರೂ ಸರ್ಕಾರವೇ ಕಾರಣ ಅಂತ ಹೇಳಿಬಿಟ್ಟು ಕಲ್ಲು ಹೊಡೆಯುವುದು, ಈ ತರಹ ನಡೆಯುತ್ತಿದ್ದರೆ ನಾವು ಏನು ಮಾಡಬೇಕು. ಆದ್ದರಿಂದ ಮಾನ್ಯ ಮಂತ್ರಿಗಳಿಗೆ ರಕ್ಷಣೆ ಕೊಡುವುದರಲ್ಲಿ ಯಾವುದೇ ತರಹ ತಪ್ಪು ಇಲ್ಲ ಎಂದು ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ. —ನೀವು ಹೇಳುವುದನ್ನು ನೋಡಿದರೆ ಅವರು ಎಲ್ಲೆಲ್ಲಿ ಹೋಗುತ್ತಾರೆಂದು ತಿಳಿದುಕೊಳ್ಳುವುದಕ್ಕೋಸ್ಕರ ಇವರನ್ನು ಹಾಕಿದ್ದೀರೆಂದು ನಮಗನಿಸುತ್ತದೆ.

ಶ್ರೀ ಆರ್. ಗುಂಡೂರಾವ್ —ಅದು ನಿಮ್ಮ ಭಾವನೆ. ಏಕೆಂದರೆ ನೀವು ಲಾಯರ್ ಆಗಿರುವುದರಿಂದ ನಿಮಗೆ ಗೊತ್ತಿರಬಹುದು. ಈ ರೀತಿ ಪೋಲೀಸ್ ಜೀಪ್ ಕೊಡುವುದು ಬೇಡವೆಂದು ಕ್ಯಾಬಿನೆಟ್‌ನಲ್ಲಿ ಅನೇಕ ಜನ ಹೇಳಿದರು. ಆದರೆ ಇತ್ತೀಚೆಗೆ ನನಗೆ ಬಹಳ ದೂರುಗಳು ಬರುತ್ತಿರುವುದರಿಂದ ನೀವು ಪೋಲೀಸ್ ಜೀಪನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ನಾನೇ ಹೇಳಿದ್ದೇನೆ. ಅಲ್ಲದೆ ಇದು ಅನೇಕ ಜನ ಸಚಿವರಿಗೆ ಅನುಭವವಾಗಿದೆ. ಏರ್ ಪೋರ್ಟ್‌ಗೆ ಹೋಗಿಬರುವಾಗ ಯಾವುದಾದರೂ ಕಾರ್ಮಿಕರ ಸತ್ಯಾಗ್ರಹವಾಗುತ್ತಿರುವಾಗ ಯಾವುದೇ ಸರ್ಕಾರಿ ಕಾರು ಬಂದರೂ ಕೂಡ ಅದಕ್ಕೆ ಕಲ್ಲು ಹೊಡೆಯುತಕ್ಕದ್ದನ್ನು ನೋಡಿದ್ದೇವೆ. ಇಂಥ ಪರಿಸ್ಥಿತಿಯನ್ನು ತಪ್ಪಿಸುವುದಕ್ಕೋಸ್ಕರ ಅವರ ರಕ್ಷಣೆಗೋಸ್ಕರ ಪೋಲೀಸ್ ಜೀಪನ್ನು ಕೊಟ್ಟಿದ್ದೇವೆ ಆದರೆ ಕೆಲವು ಸಚಿವರಿಗೆ ಈ ಕಾರುಗಳು ಅವರ ಕಾರಿನ ಹಿಂದೆ ಹೋಗುವುದು ಇಷ್ಟವಿಲ್ಲ.

ಶ್ರೀಮತಿ ಅನಸೂಯ ಗಜಾನನ ಶರ್ಮ. —ಅನಾವಶ್ಯಕವಾಗಿ ಕೆಲವರು ತೊಂದರೆ ಮಾಡುತ್ತಾರೆ.

ಶ್ರೀ ಆರ್. ಗುಂಡೂರಾವ್. —ತಮಗೂ ಗೊತ್ತಿದೆ, ಜಾಸ್ತಿ ಜನ ಬಂದರೆ ಕಲ್ಲು ಹೊಡೆಯುತ್ತಾರೆ, ಇದರಿಂದಾಗಿ ನಾವು ಸಮಾರಂಭ ಮಾಡುವುದಿಲ್ಲವೆಂದು ತಾವೇ ಹೇಳಿದ್ದೀರಿ. ಇವತ್ತು ಒಬ್ಬರು ಎಂ.ಎಲ್.ಎ. ಮೇಲೆ ಗಲಾಟೆ ಮಾಡಿದರೆ ಅವರಿಗೆ ರಕ್ಷಣೆ ಕೊಡಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಿನ್ನೆಯ ದಿವಸ ಕಾಂಗ್ರೆಸ್ ಆಫೀಸಿಗೆ ಹೋದಾಗ ಅಲ್ಲಿ ಅಹಿತಕರ ಘಟನೆ ನಡೆಯಿತು. ಇದನ್ನು ನೋಡಿದರೆ ಇನ್ನು ಮೇಲೆ ಕಾಂಗ್ರೆಸ್ ಆಫೀಸಿನಲ್ಲಿ ಅಥವಾ ಜನತಾಪಕ್ಷದ ಆಫೀಸಿನಲ್ಲಿ ಯಾವುದಾದರೂ ಸಭೆ ನಡೆಸಬೇಕಾದರೆ ಮೊದಲು ಅಲ್ಲಿಗೆ ಪೋಲೀಸರನ್ನು ಹಾಕಬೇಕಾಗುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಅನುಭವ ಆದಮೇಲೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಆದರೆ ಈ ರೀತಿ ಆಗಬೇಕೆಂದು ಯಾರಿಗೂ ಉದ್ದೇಶ ಇಲ್ಲ. ನಾನು ಆಗಲೇ ಹೇಳಿದಂತೆ ಅನೇಕ ಜನ ಮಂತ್ರಿಗಳಿಗೆ ಅವರ ಕಾರಿನ ಹಿಂದೆ ಪೋಲಿಸ್ ಜೀಪ್ ಹೋಗುವುದು ಇಷ್ಟವಿಲ್ಲ, ಆದರೆ ಅವರಿಗೆ ಇನ್ನೂ ಒಂದು ಮಾತನ್ನು ನಾವು ಏನು ಹೇಳಿದ್ದೇವೆಂದರೆ ನಿಮಗೆ ಎಲ್ಲಿ ಈ ಪೋಲೀಸ್ ಜೀಪಿನ ಅವಶ್ಯಕತೆ ಬೇಡ ಎನಿಸುತ್ತದೆ ಅಲ್ಲಿಗೆ

ಕರೆದುಕೊಂಡು ಹೋಗಬೇಡಿ ಎಂದು ಹೇಳಿದ್ದೇನೆ ಉದಾಹರಣೆಗೆ ಈ ಸಿಟಿಯಲ್ಲಿ ಅವರಿಗೆ ಬೇಕಾಗುವುದಿಲ್ಲ, ಆದರೆ ನನ್ನ ಅಭಿಪ್ರಾಯವೆಂದರೆ ಒಂದು ಘಟನೆ ಆದಮೇಲೆ ಅದನ್ನು ಸರಿಪಡಿಸುವುದಕ್ಕೆ ಬದಲು ಆ ಘಟನೆ ಆಗದಿರುವಂತೆ ನಾವು ಈ ರೀತಿ ಕ್ರಮ ಕೈಗೊಂಡಿದ್ದೇವೆ. ಅವರಿಗೆ ಬೇಕಾದರೆ ತೆಗೆದುಕೊಂಡು ಹೋಗಬಹುದು, ಬೇಡದಿದ್ದರೆ ಬಿಡಬಹುದು. ಇದು ಅವರಿಗೆ ಬಿಟ್ಟ ವಿಷಯ.

ಇನ್ನು ಫೈಲ್ ಕ್ಲಿಯರಿಂಗ್ ಬಗ್ಗೆ ಕೂಡ ನಾವು ಒಂದು ಪ್ರಯೋಗವನ್ನು ಮಾಡಿದ್ದೇವೆ. ಕ್ಯಾಬಿನೆಟ್ ಮೀಟಿಂಗ್‌ನ್ನು ಪ್ರತಿಯೊಂದು ಡಿವಿಜನ್‌ಗಳಲ್ಲೂ ನಡೆಸಿ ಆ ಡಿವಿಜನ್‌ನಲ್ಲಿರತಕ್ಕ ಎಲ್ಲ ಇಲಾಖೆಯ ಮುಖ್ಯಾಧಿಕಾರಿಗಳನ್ನೂ ಕರೆಸಿ, ನಮ್ಮ ಎಲ್ಲ ಸಚಿವರುಗಳೂ ಅಲ್ಲಿಗೆ ಹೋಗಿ ಆ ವಿಭಾಗದ ಜನರ ಕಷ್ಟ ಕಾರ್ಪಣ್ಯಗಳನ್ನು ಸ್ವತಃ ವಿಚಾರಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.೩–೪ ತಿಂಗಳ ಕಾರ್ಯಕ್ರಮವನ್ನು ನಾವು ಕೈಗೊಂಡರೆ it is another programme to meet the people to know their difficulty. ಇದೊಂದು ಪ್ರಯೋಗ. ಫೈಲ್ ಕ್ಲಿಯರಿಂಗ್‌ನಲ್ಲಿ ಎಷ್ಟೋ ಅನುಕೂಲವಾಗಿದೆ. ಆದರಂತೆಯೇ ಕೆಲವು ನ್ಯೂನತೆಗಳೂ ಕೂಡ ಕಂಡುಬಂದಿವೆ. ಅವುಗಳನ್ನು ಸರಿಪಡಿಸುವುದಕ್ಕೆ ನಾವು ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ. ತಾತ್ವಿಕವಾಗಿ ನಾವೂ, ನೀವೂ ಬೇರೆಬೇರೆ ಪಕ್ಷಗಳಿಗೆ ಸೇರಿರಬಹುದು. ಆದರೆ ನಮ್ಮ ನಿಮ್ಮೆಲ್ಲರ ಗುರಿ ಈ ಕರ್ನಾಟಕ ರಾಜ್ಯವನ್ನು ಸುಭದ್ರವಾಗಿ ಮಾಡಬೇಕು, ನಮ್ಮ ರಾಜ್ಯವನ್ನು ನಮ್ಮ ಭಾರತ ದೇಶವನ್ನು ಸಂಪದ್ಭರಿತವಾಗಿ ಮಾಡಬೇಕೆಂಬುದು. ಈ ಪ್ರಯತ್ನವನ್ನು ಮಾಡುವುದರಲ್ಲಿ ನಮ್ಮ ಸರ್ಕಾರ ತಮ್ಮ ಸಹಾಯ, ಹಾಗೂ ಸಹಕಾರ ಹಸ್ತವನ್ನು ನೀಡಿ ರಾಜ್ಯವನ್ನು ಕಟ್ಟುವುದರಲ್ಲಿ, ರಾಷ್ಟ್ರವನ್ನು ಬೆಳೆಸುವುದರಲ್ಲಿ ಪಾಲ್ಗೊಳ್ಳಬೇಕು. ಒಂದುವೇಳೆ ನಿಮ್ಮ ಸರ್ಕಾರ ಬಂದರೆ ನಾವು ಕೂಡ ನಿಮ್ಮ ಜೊತೆಗೂಡಿ ನಮ್ಮ ಸಹಕಾರ ಹಸ್ತವನ್ನು ನೀಡುತ್ತೇವೆ. ಹಿಂದೆ ಕೃಷ್ಣದೇವರಾಯನ ಕಾಲದಲ್ಲಿ ನಮ್ಮ ಕರ್ನಾಟಕ ರಾಜ್ಯ ಹೇಗೆ ಐಶ್ವರ್ಯೈಶ್ವರ್ಯಗಳಿಂದ ತುಂಬಿ ಹೆಸರುವಾಸಿಯಾಗಿತ್ತೋ ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯವನ್ನು ನಿರ್ಮಾಣ ಮಾಡುವ ದಿಸೆಯಲ್ಲಿ ನಾವೂ ನೀವೂ ಈ ೮೧ನೇ ಇಸವಿಯಲ್ಲಿ ಪ್ರಯತ್ನ ಮಾಡೋಣವೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಹೊಳೇನರಸೀಪುರ).—ಸನ್ಮಾನ್ಯ ಅಧ್ಯಕ್ಷರೆ ನಿನ್ನೆಯ ದಿವಸ ನಾನು ಬಹಳ ಪ್ರಾಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಅದು ಏನೆಂದರೆ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ೧ ಮತ್ತು ೨ನೇ ದರ್ಜೆ ಹುದ್ದೆಗಳ ನೇಮಕಾತಿಯನ್ನು ಬಿಟ್ಟು ಬಾಕಿ ಎಲ್ಲ ಅಧಿಕಾರಗಳನ್ನೂ ತೆಗೆದುಹಾಕಿದ್ದಾರೆ. ೩ನೇ ದರ್ಜೆಯವರನ್ನು ನೇಮಕ ಮಾಡುವಾಗ ಕ್ವಾಲಿಫೈಯಿಂಗ್ ಎಗ್ಸಾಮಿನೇಷನ್‌ಗೆ ಏನು ಅಂಕಗಳನ್ನು ಗಳಿಸಿರುತ್ತಾರೆ ಅದರ ಆಧಾರದ ಮೇಲೆ ಮಾಡಬೇಕೆಂದು ಹೇಳಿದ್ದೇವೆ ಹಾಗೆ ಮಾಡುವಾಗ ಪಿ.ಎಸ್.ಸಿ ಮೇಲೆ ಅನೇಕ ಒತ್ತಡಗಳು ಬರುತ್ತವೆ. ನಿಮ್ಮ ಸರ್ಕಾರಿ ಆಜ್ಞೆಯ ಪ್ರಿಯಾಂಬಲ್‌ನಲ್ಲಿ ಏನು ಹೇಳಿದ್ದೀರಿ ಎಂಬುದನ್ನು ಆಮೇಲೆ ಹೇಳುತ್ತೇನೆ. ಈಗಿರತಕ್ಕ ಪಿ.ಎಸ್.ಸಿ. ಯವರ ಮೇಲೆ ಹೆಚ್ಚಾಗಿ ಒತ್ತಡಗಳು ಬರತಕ್ಕ ಸನ್ನಿವೇಶವಿರುವುದರಿಂದ ಕ್ಲಾಸ್ ೩ ಅಪಾಯಿಂಟ್‌ಮೆಂಟ್‌ನ್ನು ತೆಗೆದುಹಾಕಿದ್ದೇವೆ ತಾವು ಆರ್ಡರ್‌ನಲ್ಲಿ ಹೇಳಿದ್ದೀರಿ. ಆದರೆ ಈಗ ಕ್ಲಾಸ್ ೧ ಮತ್ತು ೨ರ ಅಪಾಯಿಂಟ್‌ಮೆಂಟ್ ವಿಚಾರದಲ್ಲೂ ಕೂಡ ಒತ್ತಡಗಳು ಬರುತ್ತವೆ. ಆದ್ದರಿಂದ ಪಿ.ಎಸ್.ಸಿ.ಯನ್ನು ಸಂಪೂರ್ಣವಾಗಿ ರದ್ದುಮಾಡಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕ್ವಾಲಿಫೈಯಿಂಗ್ ಎಗ್ಸಾಮಿನೇಷನ್‌ನ ಮಾರ್ಕ್ಸ್ ಮೇಲೆ ಕ್ಲಾಸ್ ೧ಮತ್ತು ೨ನ್ನು ಅಪಾಯಿಂಟ್‌ಮೆಂಟ್ ಮಾಡುವಂಥ ಒಂದು ಕ್ರಾಂತಿಕಾರಕ ಪದ್ಧತಿಯನ್ನು ತಾವು ತರುವುದಕ್ಕೆ ಸಾಧ್ಯವೆ? ಈಗ ಸೆಲೆಕ್ಷನ್ ಕಮಿಟಿಯಲ್ಲಿ ೧೭ ಜನ ಸದಸ್ಯರಿದ್ದಾರೆ ಕ್ಲಾಸ್ ೩ ಅಪಾಯಿಂಟ್‌ಮೆಂಟ್ ಹೋದಮೇಲೆ ಇನ್ನು ಉಳಿದಿರುವುದು ಕ್ಲಾಸ್ ೧ ಮತ್ತು ೨ ಇದು ಒಂದು ವರ್ಷಕ್ಕೆ ಹೆಚ್ಚು ಎಂದರೆ ೨೦ ನೇಮಕಾತಿ ಬರಬಹುದು. ಅದಕ್ಕಾಗಿ ಕಾನ್‌ಸ್ಟಿಟ್ಯೂಷನ್ ಪ್ರಕಾರ ಈ ಸಂಸ್ಥೆ ಬೇಕಾಗಿಲ್ಲ. ಆದರೆ ತಾವು ಕ್ರಾಂತಿಕಾರಕ ಬದಲಾವಣೆಯನ್ನು ಮಾಡಬೇಕೆಂದು ಹೊರಟಾಗ ಕ್ಲಾಸ್ ೧ ಮತ್ತು ೨ನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರಕ್ಕಾಗಲಿ, ಒತ್ತಡಕ್ಕಾಗಲಿ ಅವಕಾಶವಿಲ್ಲದಂತೆ ಕ್ವಾಲಿಫೈಯಿಂಗ್ ಎಗ್ಸಾಮಿನೇಷನ್‌ನ ಮಾರ್ಕ್ಸ್ ಆಧಾರದಮೇಲೆ ನೇಮಕಾತಿ ಮಾಡುವುದಕ್ಕೆ ತಮ್ಮಿಂದ ಸಾಧ್ಯವೆ? When you have taken a decision to stop recruitment of Class–III posts why don't you follow the same procedure in respect of Class II posts. Then, we have to think about the work–load of the P.S.C.

also ಇಲ್ಲದಿದ್ದರೆ ಬೇರೆ ಬೇರೆ ಕಡೆಗಳಲ್ಲಿ ಯಾವರೀತಿ ನಡೆದುಕೊಂಡು ಹೋಗುತ್ತಿದೆ ಅದೇ ರೀತಿ ತಾವೂ ಕೂಡ ಈ ಪಿ. ಎಸ್. ಸಿ. ಗೆ ವರ್ಕ್‌ಲೋಡ್ ಕೊಟ್ಟು ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಸಿದ್ದರಿದ್ದೀರಾ.

ಶ್ರೀ ಆರ್ ಗುಂಡೂರಾವ್.—ಬೇರೆ ಬೇರೆ ರಾಜ್ಯಗಳಲ್ಲಿ ಯಾವರೀತಿ ನಡೆಯುತ್ತಿದೆ ಎಂಬುದನ್ನು ಅಲ್ಲಿಂದ ವರದಿ ತರಿಸಿಕೊಂಡು ನೋಡಿ ಅದರ ಪ್ರಕಾರ ಇವರಿಗೆ ವರ್ಕ್‌ಲೋಡ್ ಬರುವಂತೆ ಮಾಡೋಣ. ಇದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಅದು ಏನೆಂದರೆ ಮೇಜರ್ ಇರಿಗೇಷನ್‌ನಲ್ಲಿ ಟನಲ್, ಅಕ್ವಡಕ್ಟ್ ಬಗ್ಗೆ ಕಳೆದ ಒಂದೂವರೆ ವರ್ಷದಿಂದ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳದಿರುವುದರಿಂದ ಅಲ್ಲಿ ಎಲ್ಲ ಕೆಲಸವೂ ನಿಂತುಹೋಗಿವೆ. ಉದಾಹರಣೆಗೆ ಹೇಳುವುದಾದರೆ ಬೆನ್ನಿ ಹಳ್ಳ ಅಕ್ವಡಕ್ಟ್ ಆದರೆ ಇವತ್ತು ಸುಮಾರು ೨ ಲಕ್ಷ ಎಕರೆ ನೀರಾವರಿಯಾಗುತ್ತದೆ ಅದೇ ರೀತಿ ಘಟಪ್ರಭಾದಲ್ಲಿ ಕೆಲವು ಮೇಜರ್ ಇರಿಗೇಷನ್‌ನಲ್ಲಿ ಇರತಕ್ಕ ಕೆಲವು ನಿರ್ಣಯ ತೆಗೆದುಕೊಳ್ಳುತ್ತೀರಿ ? ತಾವು ಹೆಚ್ಚಿಗೆ ರೇಟುಗಾದರೂ ಕೊಡಿ, ಇಲ್ಲವೇ ಟೆಂಡರ್ ಆದರೂ ಕರೆಯಿರಿ. ಒಟ್ಟಿನಲ್ಲಿ ಇದರ ಬಗ್ಗೆ ಏನಾದರೂ ಒಂದು ಕಾಲವನ್ನು ನಿರ್ಧರಿಸುತ್ತೀರಾ ?

ಇನ್ನು ಎರಡನೆಯದು ಎಂದರೆ ಆಪ್ಪರ್ ಕೃಷ್ಣಾದಲ್ಲಿ ಒಂದೂವರೆ ಲಕ್ಷ ಚೀಲ ಸಿಮೆಂಟ್ ಕಾಣೆಯಾಗಿದೆ ಎಂದು ಹೇಳಿದ್ದೇನೆ ಒಂದುವೇಳೆ ಅದು ಕಾಣೆಯಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಆರ್. ಗುಂಡೂರಾವ್.—ತಾವು ಹೇಳಿದಂತೆ ಮೇಜರ್ ಇರಿಗೇಷನ್‌ಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳು ಏನು ನಿಧಾನವಾಗಿದೆ ಅವುಗಳು ತಾಂತ್ರಿಕವಾಗಿ ನಿಧಾನವಾಗಿವೆಯೇ, ಅಥವಾ ಅಡ್ಮಿನಿಸ್ಟ್ರೇಟಿವ್ ಲೈನ್‌ನಿಂದ ನಿಧಾನವಾಗಿವೆಯೇ ಎಂಬುದನ್ನು ಪರಿಶೀಲಿಸಿ ಆದಷ್ಟು ಜಾಗ್ರತೆ ಮಾಂಜೂರಾತಿಯನ್ನು ಕೊಡಬೇಕೋ ಅಥವಾ ಲೀಗಲ್ ತೊಂದರೆ ಏನಾದರೂ ಇದ್ದರೆ ಅದನ್ನು ನಿವಾರಣೆ ಮಾಡಬೇಕೋ ಅದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಸಿಮೆಂಟ್ ವಿಚಾರದಲ್ಲಿ ಏನು ಹೇಳಿದ್ದೀರಿ ಅದನ್ನು ಈಗಾಗಲೇ ಪೋಲೀಸ್ ಇಲಾಖೆ ಮುಖಾಂತರ ವಿಚಾರಣೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಅದರ ವರದಿ ಇನ್ನೇನು ಬರುವುದರಲ್ಲಿದೆ. ಅದು ಬಂದಕೂಡಲೇ ಸಂಬಂಧಪಟ್ಟ ಅಧಿಕಾರಿ ಯಾರೇ ಆಗಿರಲಿ, ಎಷ್ಟೇ ದೊಡ್ಡವರಿರಲಿ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳ ಬಯಸುತ್ತೇನೆ.

ಶ್ರೀ ಕೆ.ಎಂ. ತಮ್ಮಯ್ಯ.—ಮಾನ್ಯ ಸಭಾಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುತ್ತಾ ತಮ್ಮ ಉತ್ತರದಲ್ಲಿ ಭ್ರಷ್ಟಾಚಾರಕ್ಕೆ ಒಳಗಾದ ಕೆಲವು ಅಧಿಕಾರಿಗಳ ಮನೆಗಳನ್ನು ರೈಡ್ ಮಾಡಿದನಂತರ ಅವರಿಗೆ ಸಂಬಂಧಪಟ್ಟ ಮೂವಬಲ್ ಪ್ರಾಪರ್ಟಿ ಮತ್ತು ಇಮ್‌ಮೂವಬಲ್ ಪ್ರಾಪರ್ಟಿಯ ವಿಚಾರದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್ ಗುಂಡೂರಾವ್.—ರೈಡ್ ಮಾಡಿರತಕ್ಕಂಥ ಅಧಿಕಾರಿಗಳ ಹತ್ತಿರ ಎಷ್ಟು ಮೂವಬಲ್ ಮತ್ತು ಇಮ್‌ಮೂವಬಲ್ ಪ್ರಾಪರ್ಟಿ ಇದೆ ಅದನ್ನೆಲ್ಲ ವ್ಯಾಲ್ಯು ಮಾಡಿ ಅವರ ಉತ್ಪನ್ನಕ್ಕೂ ಜಾಸ್ತಿ ಇದ್ದರೆ ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳುತ್ತಾರೆಂದು ತಿಳಿಸುತ್ತೇನೆ. ಮತ್ತೆ ಇನ್‌ವೆಸ್ಟಿಗೇಷನ್ ಹಂತದಲ್ಲಿಯೇ ಇವೆಲ್ಲವೂ ಯಾವ ರೀತಿ ಬಂದಿತು ಎಂಬ ಬಗ್ಗೆಯೂ ಕೂಡ ಡಿಟೇಲ್ ಇನ್‌ವೆಸ್ಟಿಗೇಷನ್ ಆಗುತ್ತದೆ.

SRI PRABHAKAR TELKAR.—Sir, while replying the Hon'bele Chief Minister was kind enough to tell that there should not be any caste-wise or communitywise appointment etc. It is the policy of our party as well as of this Government to safeguard the interests of the Scheduled Castes, Scheduled Tribes, Backward classes and minorities.

Last there should not be any assumption that this Government is not going to safeguard their interest in future and keeping in mind the national interest, the Hon'ble Chief Minister has argued that. In this connection I would like to seek a clarification, That is, whether the safeguards which have been given to the backward class people, minorities, Scheduled Castes and Scheduled Tribes will be protected?

SRI R. GUNDU RAO.—I think hon. member Sri Telkar has not followed my speech correctly. I never said anything about that at all. All the policies regarding reservations backward class reservation, 18% reservation, etc., they will be effectively implemented. I only spoke in the general interest of our country. All the reservation policies, rules will be effectively implemented.

ಶ್ರೀ ಕೆ. ಯಂಕಟಪ್ಪ (ತೋಟಗಾರಿಕೆ ಮತ್ತು ಬಂಧೀಖಾನೆಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ನನ್ನ ಎರಡು ಇಲಾಖೆಯ ಮೇಲೆ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಕಡಿಮೆ ಜನ ಸದಸ್ಯರು ಭಾಗವಹಿಸಿದ್ದರು. ತೋಟಗಾರಿಕೆ ಇಲಾಖೆ ಮೇಲೆ ನಾವು ತೆಗೆದುಕೊಂಡಿರುವ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡುವುದಾದರೆ ಈವೊತ್ತು ಈ ತೋಟಗಾರಿಕೆ ಇಲಾಖೆ ಪ್ರಾಮುಖ್ಯವಾಗಿ ವ್ಯವಸಾಯಗಾರರಿಗೆ ಬಹಳ ಉಪಯುಕ್ತವಾದ ಇಲಾಖೆಯಾಗಿರುತ್ತದೆಂದು ನಾನು ಭಾವಿಸಿದ್ದೇನೆ. ಶ್ರೀಮಾನ್ ತಕ್ಕೇಡ್‌ರವರು ಬೆಳಗಾಮ್ ವಿಭಾಗದಲ್ಲಿ ಮತ್ತು ರಾಯಚೂರು ವಿಭಾಗಗಳಲ್ಲಿ ಇಲಾಖೆಯ ಕೆಲಸ ಕಾರ್ಯಗಳು ಬಹಳ ಕಡಿಮೆಯಾಗಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಈ ಭಾಗಗಳಲ್ಲಿ ಸಾಕಷ್ಟು ಕಾರ್ಯಗಳನ್ನು ತೆಗೆದುಕೊಳ್ಳಲು ಈಗಾಲೇ ಸೂಚನೆಯನ್ನು ಕೊಟ್ಟಿದ್ದೇನೆ ಆಯವ್ಯಯದಲ್ಲಿ ಸಾಕಷ್ಟು ಹಣವನ್ನೂ ಸಹ ಒದಗಿಸಿದ್ದೇನೆ. ಅದಲ್ಲದೆ ನಮ್ಮ ತೋಟಗಾರಿಕೆ ಇಲಾಖೆಯ ಪರವಾಗಿ ಸುಮಾರು ೬೫ಕೋಟಿರೂಪಾಯಿಗಳ ನೆರವನ್ನುವಿಶ್ವಬ್ಯಾಂಕ್‌ನಿಂದಕೋರಿ ಅರ್ಜಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇದರ ಜೊತೆಗೆ ಬಹಳ ಪ್ರಾಮುಖ್ಯವಾಗಿ ತೆಂಗಿನ ನಾರಿನ ಬೋರ್ಡ್ ಎಂದು ಕೇರಳದಲ್ಲಿ ರಚನೆಯಾಗಿರುವಂತೆ ರಾಜ್ಯದಲ್ಲೂ ಕೂಡ ಒಂದು ಉಪ ಕಚೇರಿಯನ್ನು ಮಾಡಬೇಕೆಂದು ಹೇಳಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನಾವು ಕೇಳಿದ ಹಾಗೆ ಕೇಂದ್ರ ಸರ್ಕಾರದವರು ರಾಜ್ಯದಲ್ಲಿ ಒಂದು ಉಪ ಕಚೇರಿಯನ್ನು ತೆಗೆಯಲು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರಿಂದ ಸಾಕಷ್ಟು ಸೌಲಭ್ಯಗಳು ನಮ್ಮ ರಾಜ್ಯಕ್ಕೆ ದೊರೆಯುತ್ತದೆಂದು ಹೇಳುತ್ತೇನೆ. ಮತ್ತು ಬಹಳಪ್ರಾಮುಖ್ಯವಾಗಿ ಕೋಸ್ಟಲ್ ಏರಿಯಾದಲ್ಲಿ ಮಾರ್ಕೆಟಿಂಗ್ ಬಗ್ಗೆ ಬೇಕಾದ ವ್ಯವಸ್ಥೆಯನ್ನು ಸಹಕಾರಿ ಇಲಾಖೆಯಿಂದ ಮಾಡುವುದಾಗಿ ಪ್ರಯತ್ನಿಸಿದ್ದೇವೆ. ಮಾನ್ಯ ಸಂಜೀವಶೆಟ್ಟರು ಮಾತನಾಡುತ್ತಾ ಒಂದೆರಡು ಅಂಶಗಳನ್ನು ಈ ಇಲಾಖೆಯ ಬಗ್ಗೆ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ಮಾತನಾಡಿ ಗೇರು ಬೀಜ ಯೋಜನೆ ಸುಮಾರು ೭೫೦೦ ಹೆಕ್ಟೇರ್ ಭೂಮಿ ಒಳಗೊಳ್ಳುವಂತೆ ಮಾಡಬೇಕೆಂದು ಯೋಜಿಸಿದ್ದು ಈಗ ೨೫೦೦ ಹೆಕ್ಟೇರ್ ಭೂಮಿಯಲ್ಲಿ ಗೇರುಬೀಜವನ್ನು ಬೆಳೆಯಲು ಆರಂಭಿಸಬೇಕೆಂದು ಮಾತನಾಡಿದ್ದೇನೆ. ಈ ವರ್ಷ ಈ ಕೆಲಸ ಅಷ್ಟು ಸಮರ್ಪಕವಾಗಿ ಆಗಿಲ್ಲವೆಂದು ಇಲಾಖೆಯ ಅಧಿಕಾರಿಗಳನ್ನು ಅಲ್ಲಿಗೆ ಪೋಸ್ಟ್ ಮಾಡಿಲ್ಲವೆಂದು ತಾವು ಕೇಳಿರತಕ್ಕಂಥದ್ದು ಸರಿಯಲ್ಲ. ಅಲ್ಲಿಗೆ ಸಾಕಷ್ಟು ಅಧಿಕಾರಿಗಳನ್ನು ಹಾಕಿದ್ದೇವೆ. ಮತ್ತು ಸೂಕ್ತ ಕಾರ್ಯಕ್ರಮಗಳನ್ನು ಕೂಡ ತೆಗೆದುಕೊಳ್ಳುವ ಸಲುವಾಗಿ ನಾಳೆಯ ದಿವಸವೇ ಅಲ್ಲಿಗೆ ಹೋಗತಕ್ಕಂಥದ್ದು ಇದೆ. ಈ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ನಿಗವಹಿಸ್ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುವುದಕ್ಕೆ ಇಚ್ಛಿಸುತ್ತೇನೆ.

ಇದಾದ ಮೇಲೆ ನಮ್ಮ ಕಾರಾಗೃಹ ಇಲಾಖೆಯ ಬಗ್ಗೆ ಮಾನ್ಯ ಎಚ್.ಡಿ. ದೇವೇಗೌಡರು ಮಾನ್ಯ ತಕ್ಕೇಡ್‌ರವರು. ಮಾನ್ಯ ಸಯನಕ್‌ರವರೂ ಮತ್ತು ಮಾನ್ಯ ಚಂದ್ರಶೇಖರ್‌ರವರೂ ಕೂಡ ಮಾತನಾಡಿದ್ದಾರೆ. ೧೯೭೮ಕ್ಕೆ ೧೪ ವರ್ಷ ಕಾರಾಗೃಹ ವಾಸಕ್ಕೆ ಒಳಗಾಗಿರುವವರನ್ನು ೧೦ ವರ್ಷಕ್ಕೆ ಇಳಿಸಿ ಬಿಡುಗಡೆ ಮಾಡಬೇಕೆಂದು ಹೇಳಿರುತ್ತಾರೆ. ೧೪ ವರ್ಷ ಕಾರಾಗೃಹ ವಾಸ ಶಿಕ್ಷೆಯನ್ನು ಕಡಿಮೆ ಮಾಡ

ಬಾರದೆಂದು ಳಿಖಿಖಿ ಎ ಸೆಕ್ಷನ್ ಕೇಂದ್ರ ಸರ್ಕಾರದ ನಿಲುವು ಆಗಿರುವುದರಿಂದ ನಾವು ಇಲ್ಲಿ ಕಡಿಮೆ ಮಾಡುವುದಕ್ಕೆ ಬರುವುದಿಲ್ಲ. ಕೇಂದ್ರದಲ್ಲಿ ಪ್ರಸ್ತಾಪಮಾಡಿ, ಸುಪ್ರೀಮ್ ಕೋರ್ಟಿನಲ್ಲಿ ತೀರ್ಪು ಬಂದಿರುವುದರಿಂದ ನಾವು ಈಗಾಗಲೇ ೬ಜನರಿಗೆ ಬಿಡುಗಡೆ ಮಾಡಿದ್ದೇವೆ. ಮತ್ತು ನಮ್ಮ ಐ.ಜಿ. ಪ್ರಿಸನ್ಸ್‌ರವರೂ ೨೪೨ ಜನರ ಹೆಸರನ್ನು ಪಟ್ಟಿ ಮಾಡಿ ಈಪೊತ್ತು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಪರೀಕ್ಷೆ ಮಾಡಿ ತಕ್ಷಣದಲ್ಲಿಯೇ ಬಿಡುಗಡೆ ಮಾಡುತ್ತೇವೆ. ಇನ್ನು ಉಳಿದವರನ್ನು ಸಹ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಳ್ಳತಕ್ಕಂಥ ಹಂತದಲ್ಲಿ ಇದ್ದೇವೆ. ಇದರ ಜೊತೆಗೆ ಮತ್ತೆ ಕೆಲವು ಫ್ರಾಡ್ ಬಗ್ಗೆ ಮಾತನಾಡಿದ್ದಾರೆ. ಅದನ್ನೂ ಕೂಡ ಸರಿಪಡಿಸತಕ್ಕಂಥ ಯೋಜನೆಯಲ್ಲಿದ್ದೇವೆ. ಜೊತೆಗೆ ಕೆಲವು ಮುಖ್ಯವಾಗಿ ಕಾರಾಗೃಹ ವಾಸದಲ್ಲಿ ಇರತಕ್ಕಂಥ ಕೆಲವು ಹೆಣ್ಣುಮಕ್ಕಳ ಮಾಫಾರ್ಡು ಮಾಡತಕ್ಕಂಥಾದ್ದು ಮತ್ತು ಅವರು ಸಮಾಜ ಜೀವನದಲ್ಲಿ ಹೊಂದಿಕೊಂಡು ಹೋಗತಕ್ಕಂಥದ್ದಕ್ಕೂ ಕೂಡ ವ್ಯವಸ್ಥೆಯನ್ನು ಮಾಡಿರುತ್ತೇವೆ. ಆದ್ದರಿಂದ ಈಗ ಸದನದ ಮುಂದೆ ಮಂಡಿಸಿರತಕ್ಕಂಥ ಈ ಇಲಾಖೆಯ ಬೇಡಿಕೆಯನ್ನು ದಯವಿಟ್ಟು ಮಂಜೂರು ಮಾಡಿಕೊಡಬೇಕೆಂದು ಹೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಪು ಸಂಜೀವಶೆಟ್ಟಿ .— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೭೫೦೦ ಎಕರೆಗಳಷ್ಟು ಪ್ರದೇಶದಲ್ಲಿ ಪಿಶ್ವಬ್ಯಾಂಕ್ ನೆರವಿನಿಂದ ಗೇರುಬೀಜ ಬೆಳೆಯನ್ನು ಮಾಡಲು ಯೋಜಿಸಿರುವುದಾಗಿ ಮತ್ತು ೨ ೦೦ ಹೆಕ್ಟೇರ್‌ಗಳಲ್ಲಿ ಹೊಸದಾಗಿ ಸಸಿಗಳನ್ನು ನೆಡುವುದಾಗಿ ತಿಳಿಸಿದರು. ಹೊಸದಾಗಿ ನೆಟ್ಟಂಥ ಸಸಿಗಳು ಬದುಕಲು ಹೆಚ್ಚಿನ ಗಮನಸಂವನ್ನು ಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಗಿಡಗಳು ಸ್ಮಗಲ್ ಆಗುತ್ತಿರುವುದನ್ನೂ ತಪ್ಪಿಸಲು ಅಧಿಕಾರಿಗಳು ಪಶ್ರದ್ಧಾಪೂರ್ವಕತೆಯಿಂದ ಕೆಲಸ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ .— ಮಾನ್ಯ ಅಧ್ಯಕ್ಷರೇ ಹಾಸನಜಿಲ್ಲೆಯಲ್ಲಿ ಬಹಳ ವಿಶೇಷ ಆಲೂಗೆಡ್ಡೆ ಬೆಳೆ ಬಂದಿರುತ್ತದೆ. ಮೆಷಾರಿಟಿ ಬೆಳೆ ಬಂದಮೇಲೆ ಅವು ರೆಗ್ಯುಲೇಟೆಡ್ ಮಾರ್ಕೆಟ್ ಬಂದಮೇಲೆ ಅದನ್ನು ಗ್ರೇಡಿಂಗ್‌ಮಾಡಿ ಮಾರಾಟ ಮಾಡದಿದ್ದರೆ ಅವು ಕೊಳೆತು ಹಾಳಾಗಿಹೋಗುತ್ತದೆ. ಆದ್ದರಿಂದ ಸರ್ಕಾರಿ ಲೆವೆಲ್‌ನಲ್ಲಿ ಮಾರ್ಕೆಟಿಂಗ್ ಫೆಡರೇಷನ್‌ರವರು ಆಲೂಗೆಡ್ಡೆಯನ್ನು ಕೊಂಡು ಕೊಂಡು ಬೇರೆ ಕಡೆಗೆ ಕಳುಹಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಒಂದು ವಿಂಟಿಂಗ್ ಸಹ ಕರೆಯುವುದಾಗಿ ತಿಳಿಸಿರುವಂತೆ ವಿಂಟಿಂಗ್ ಕರೆಯಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ರೈತರು ಯೂನಿಯನ್‌ಗಳನ್ನು ಮಾಡಿಕೊಂಡು ಕೋ-ಆಪರೇಟೀವ್ ಸೊಸೈಟಿಗಳನ್ನು ಮಾಡಿಕೊಂಡಿರುವ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ಬೆಳೆದಂಥ ತರಕಾರಿಯನ್ನು ಸೊಸೈಟಿಗಳ ಮುಖಾಂತರ ಕೊಂಡು ಕೊಂಡು ಬೇರೆ ಕಡೆಗಳಿಗೆ ಅವಶ್ಯಕವಾಗಿ ಕಳುಹಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಈ ವ್ಯವಸ್ಥೆ ಇರುವಂತೆ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಈ ವ್ಯವಸ್ಥೆಯನ್ನು ವಿಸ್ತರಿಸಬೇಕೆಂದು ಈ ಎರಡು ವಿಚಾರಗಳ ಬಗ್ಗೆಯೂ ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಯಂಕಟಪ್ಪ .— ಮಾನ್ಯ ಅಧ್ಯಕ್ಷರೇ, ನಾನು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಹಾಸನ, ಕೋಲಾರ, ಬೆಂಗಳೂರು; ಬೆಳಗಾಂ ಹಾಗೂ ಧಾರವಾಡ ಈ ಪ್ರದೇಶಗಳಲ್ಲಿ ಆಲೂಗೆಡ್ಡೆ ಬೆಳೆಸುವ ಬಗ್ಗೆ ಪ್ರಾರಂಭಿಸಿ ತೊಂದರೆ ಇದೆ ಎಂದು ತಿಳಿದುಬಂತು. ಹಾಗೂ ಈ ಬಗ್ಗೆ ಸಾಗಣಿಯಲ್ಲಿ ಅಸ್ತವ್ಯಸ್ತವಿದೆಯೆಂದು ಕೇಳಿದ್ದೇನೆ. ಹಾಗೂ ಈ ಬಗ್ಗೆ ನಾನು ಕೇಂದ್ರದಲ್ಲಿನ ರೈಲ್ವೇ ಸಚಿವರೊಡನೆ ಕೂಡಾ ಮಾತನಾಡಿದ್ದೇನೆ. ಮಾನ್ಯ ಹನುಮೇಗೌಡರು ಹೇಳಿದಹಾಗೆ ನಾಲ್ಕೈದು ದಿವಸಗಳ ಹಿಂದೆ ಮಾರ್ಕೆಟಿಂಗ್ ಫೆಡರೇಷನ್‌ನವರನ್ನೂ, ಮಾನ್ಯ ಹನುಮೇಗೌಡರನ್ನೂ ಹಾಗೂ ಆ ಕ್ಷೇತ್ರದ ಶಾಸಕರಾದ ಶ್ರೀ ಲಕ್ಷ್ಮಣಯ್ಯ ಅವರನ್ನೂ ಹಾಗೂ ಜಿಲ್ಲಾ ಬ್ಯಾಂಕ್ ಅಧ್ಯಕ್ಷರನ್ನೂ ಕರೆಸಿ ಸಭೆ ನಡೆಸಿದ್ದೇನೆ. ಆ ಸಭೆಯಲ್ಲಿ ಈ ವಿಷಯದ ಬಗ್ಗೆ ನಮ್ಮ ಇಲಾಖೆಯವರು ಯಾವರೀತಿ ಮಾಡಬೇಕೆಂತಲೂ, ಮಾರ್ಕೆಟಿಂಗ್ ಫೆಡರೇಷನ್‌ನವರು ಯಾವ ರೀತಿ ಹಾಗೂ ನ್ಯಾಫೆಡ್‌ನವರು ಯಾವ ರೀತಿ ಮಾಡಬೇಕೆಂತಲೂ ಚರ್ಚೆ ಮಾಡಿದ್ದೇವೆ. ಈ ಒಂದು ಚರ್ಚೆ ಮಾಡುವ ಕಾಲದಲ್ಲಿ ಫೆಡರೇಷನ್ನಿನ ಮೇನೇಜಿಂಗ್ ಡೈರೆಕ್ಟರ್ ಆವರು ಕಾರಣಾಂತರದಿಂದ ಬೇರೆ ಕಡೆ ಹೋಗಿದ್ದುದರಿಂದ. ಅವರು ಬಂದಮೇಲೆ ಈ ಬಗ್ಗೆ ಅಂತಿಮ ನಿಲುವನ್ನು ತೆಗೆದುಕೊಳ್ಳುತ್ತೇವೆಂದು ನಾವು ಹೇಳಿದ್ದೇವೆ. ಫೆಡರೇಷನ್ನಿನವರು ಈ ಬಗ್ಗೆ ಕಾರ್ಯ

ಕ್ರಮ ತೆಗೆದುಕೊಂಡ ಮೇಲೆ ನಮ್ಮ ಇಲಾಖೆಯಿಂದ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿವರ ಇದೆ ಅದನ್ನು ಪೂರ್ತಿಯಾಗಿ ನಮ್ಮ ಇಲಾಖೆಯಿಂದ ಮಾಡಲಾಗುತ್ತದೆ. ಫೆಡರೇಷನ್‌ನ ಆರ್ಥಿಕ ಪರಿಸ್ಥಿತಿಯನ್ನು ಭದ್ರಮಾಡಲು ಅಪೆಕ್ಸ್ ಬ್ಯಾಂಕಿನವರು ಒಪ್ಪಿಕೊಂಡಿದ್ದು ಆ ಬಗ್ಗೆ ಫೆಡರೇಷನ್ನಿನವರು ಪ್ರಪಹರಿಸಿ, ವಿಚಾರಿಸಿ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿದ್ದಾರೆ. ಈ ಬಗ್ಗೆ ನಾನು ವಿಚಾರ ಮಾಡಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಹಾಗೂ ಮಾನ್ಯ ಸದಸ್ಯರು ಮಾರ್ಕೆಟಿಂಗ್ ಬಗ್ಗೆ ಒಂದು ವಿಚಾರ ಪ್ರಸ್ತಾಪ ಮಾಡಿದರು. ಬೆಂಗಳೂರು ಹಾಗೂ ಕೋಲಾರದಲ್ಲಿ ಏನೊಂದು ಯೂನಿಯನ್ ಮಾಡಿ ವ್ಯವಸ್ಥೆ ಮಾಡಿದ್ದೀರಿ ಅದೇ ರೀತಿ ಬೇರೆ ಬೇರೆ ಜಿಲ್ಲೆಗಳಲ್ಲಿ ಈ ವ್ಯವಸ್ಥೆ ಮಾಡುತ್ತೀರಾ ಎಂದಿದ್ದಾರೆ. ನಮ್ಮ ತೋಟಗಾರಿಕೆ ಇಲಾಖೆಯಿಂದ ಪ್ರತಿಯೊಂದು ಜಿಲ್ಲೆಗಳಲ್ಲಿಯೂ ಆಗಸ್ಟ್ ೧೫ನೇ ತಾರೀಖಿನ ದಿನ ನಾವು ಸಹಕಾರ ಸಂಘದ ರೂಪದಲ್ಲಿ ಇದನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಕೋಲಾರ ಹಾಗೂ ಬೆಂಗಳೂರಿನಲ್ಲಿ ಯೂನಿಯನ್ ಯಾವ ರೀತಿ ಸಮರ್ಪಕವಾಗಿ ಈ ಕೆಲಸ ಮಾಡುತ್ತ ದೆಂಬುದನ್ನು ತಿಳಿದುಕೊಂಡು ನೋಡಿದ ಮೇಲೆ ಅದೇ ರೀತಿಯ ಕಾರ್ಯಕ್ರಮಗಳನ್ನು ಬೇರೆ ಜಿಲ್ಲೆಗಳ ವ್ಯಾಪ್ತಿಗೆ ದೊರಕಿಸಿ ಕೊಡಬೇಕೆಂದು ನಾವು ಈ ಎರಡು ಕಡೆ ಆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಶ್ರೀಮತಿ ಅಸಸೂಯ ಗಜಾನನ ಶರ್ಮ .— ಅಧ್ಯಕ್ಷರೇ. ನಾನು ಈಗ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತಿಳಿಸಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣವನ್ನು ಮಾಡುವಾಗ ಬೇಡ್ತಿ ಚಳವಳಿಯಲ್ಲಿ ಜನ ನನಗೆ ಹೊಡೆಯುವವರಿದ್ದರು ಎನ್ನುವ ಹಾಗೆ ತಿಳಿದುಕೊಂಡು ಭಾಷಣದಲ್ಲಿ ಆ ವಿಷಯವನ್ನು ಪ್ರಸ್ತಾಪಿಸಿದರು ಎಂದು ಕಾಣುತ್ತದೆ. ಅದು ಹಾಗಲ್ಲ, ಅಲ್ಲಿಯ ಜನರು ಸರ್ಕಾರಿ ಆಸ್ತಿ ಪಾಸ್ತಿಯನ್ನು ಹಾಳುಮಾಡಬಹುದೆಂಬ ಅಭಿಪ್ರಾಯವನ್ನು ನಾನು ಸದನದಲ್ಲಿ ವ್ಯಕ್ತಪಡಿಸಿದ್ದೇನೆ. ನನಗೆ ಅಲ್ಲಿಯ ಜನರ ರಕ್ಷಣೆ ತುಂಬಾ ಇದೆ.ನನಗೇನೂ ಪೋಲೀಸಿನವರ ರಕ್ಷಣೆ ಬೇಡ ಪೊಲೀಸಿನವರ ಬಂದೋಬಸ್ತು ಹೆಚ್ಚು ಇಟ್ಟುಕೊಂಡರೆ ಅದು ಅಶುಭ ಲಕ್ಷಣ ಎಂದು ನಾನು ಹೇಳಿದೆ. ಅದೂ ಅಲ್ಲದೇ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಇಬ್ರಾಹಿಂ ಅವರ ವಿಷಯವನ್ನು ನನಗೆ ಬಿಟ್ಟುಬಿಡಿ ಎಂದು ಹೇಳಿದರು. ಆ ಬಗ್ಗೆ ಈ ಸದನದ ಜವಾಬ್ದಾರಿ ಸ್ವಲ್ಪ ಮಟ್ಟಿಗೆ ಇದೆ ಎಂದು ನಾನು ಹೇಳುತ್ತೇನೆ. ಮಾನ್ಯ ಇಬ್ರಾಹಿಂ ಅವರ ಸಂಬಂಧದಲ್ಲಿ ಪೋಲೀಸರ ವರ್ತಾವರ್ತನೆ ನಡೆದಿರುವುದು ಎಲ್ಲರಿಗೂ ಗೊತ್ತಿದೆ. ಈ ರೀತಿ ವರ್ತಾವರ್ತನೆ ಮಾಡುವುದರಿಂದ ಅವರ ಮೇಲೆ ಚಾರ್ಜುಶೀಟ್ ಹಾಕುವುದಕ್ಕೆ ಇವರು ಪೋಲೀಸಿನವರನ್ನು ಸ್ವರ್ಗ ಲೋಕದಿಂದ ಕರೆದುಕೊಂಡು ಬರುತ್ತಾರೆಯೇ ? ಅವರೇನು ದೇವಲೋಕದಿಂದ ಬರುತ್ತಾರೆಯೆ ? ಅಥವಾ ಇವರು ಹೆಲಿಕಾಪ್ಟರ್ ಕಳುಹಿಸಿ ಅವರನ್ನು ತರಿಸುತ್ತಾರೆಯೇ ಹೇಗೆ ? ಪೋಲೀಸಿನವರು ಈ ರೀತಿ ಮಾಡಿದರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೀರಿ. ಈ ವಿಷಯದ ಬಗ್ಗೆ ನಾವು ಎಲ್ಲಿ ಹೋದರೂ ಸಾರ್ವಜನಿಕರು ನಮಗೆ ಕೇಳುತ್ತಿರುತ್ತಾರೆ. ಈ ಮೇಲಿನ ವಿಷಯವನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

MR. SPEAKER.—The question is.

> "That the sums not exceeding the amounts mentioned in the list of demands inclusive of the sum granted 'on account' be granted to the Government to defray the charges which will come in course of payment during the financial year for the period ending on the 31st day of March 1982 in respect of Demand Nos. 12, 24, 37, 38, 39, 40, 41, 22, 2 and 25."

The Motion was adopted and the Demands were granted.

(As ordered by the Speaker, the Demands voted are reproduced below.)

DEMAND No. 12

"That a sum not exceeding Rs. 1,41,78,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Literary, Cultural Affairs and Development of Kannada".

DEMAND No. 24

"That a sum not exceeding Rs. 44,80,35,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Police and Fire Services".

DEMAND No. 37

"That a sum not exceeding Rs. 40,00,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Election".

DEMAND No. 38

"That a sum not exceeding Rs. 59,24,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Governor, Ministers and Public Service Commission".

DEMAND No. 39

"That a sum not exceeding Rs. 5,05,67,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Secretariat".

DEMAND No. 40

"That a sum not exceeding Rs. 7,28,70,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "District Administration".

DEMAND No. 41

"That a sum not exceeding Rs. 3,48,11,000 on Revenue Account and Rs. 2,99,50,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Miscellaneous Demands of Chief Minister".

DEMAND No. 22

"That a sum not exceeding Rs. 6,79,87,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "State Excise".

DEMAND No. 2

' That a sum not exceeding Rs. 5,98,98,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Horticulture".

DEMAND No. 25

"That a sum not exceeding Rs. 2,10,95,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Jails".

MR. SPEAKER.—Now, the House stands adjourned to reassemble again at 3.00 P.M.

The House adjourned at Thirty-five minutes past Twelve of the Clock to meet again at Three of the Clock.